# ಬೃಹಚ್ಚರಣ

ಸಂಘದ ವಾರ್ತಾ ಪತ್ರಿಕೆ

ಸಂಘದ ಬ್ಯಾಂಕ್ ಖಾತೆಯ ವಿವರ

Mysore Manjapattur Dravida Bruhacharana Sangha
Canara Bank, Sarakki Branch
IFSC: CNRB0000883
A/c No.: **110101195949**
UPI ID: 90574090195949@cnrb

ಸಂಪುಟ : 16 ಸಂಚಿಕೆ : 2 ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್ – ಜುಲೈ 2025

E-mail : queries@mmdbs.in magazines@mmdbs.in web : www.mmdbs.in


## ಸರ್ವಸದಸ್ಯರ ಸಭೆ ವಿಶೇಷಾಂಕ




## ಶಂಕರ ಜಯಂತಿ



## ಅಧ್ಯಕ್ಷರ ನುಡಿ

ಬಂಧು-ಮಿತ್ರರಿಗೆಲ್ಲ ನಮಸ್ಕಾರಗಳು!

ವಾರ್ಷಿಕ ಸರ್ವಸದಸ್ಯರ ಸಭೆಯು ಈ ವರ್ಷವೂ ತಮ್ಮ ಉಪಸ್ಥಿತಿ ಹಾಗೂ ಸಹಕಾರದಿಂದ ಸುಗಮವಾಗಿ ಸಂಪನ್ನಗೊಂಡಿತು. ಅದಕ್ಕಾಗಿ ಕಾರ್ಯಕಾರಿ ಸಮಿತಿಯ ಪರವಾಗಿ ಸದಸ್ಯರಿಗೆ ಧನ್ಯವಾದಗಳು.

ನಾನು ಸಂಘದ ಅಧ್ಯಕ್ಷನಾಗಿ ಒಂದು ವರ್ಷವನ್ನು ನಿಮ್ಮಗಳ ಹಾರೈಕೆ ಮತ್ತು ಆಶೀರ್ವಾದಗಳಿಂದ ಪೂರ್ಣಗೊಳಿಸಿದ್ದೇನೆ. ಈ ಅವಧಿಯಲ್ಲಿ ಸಹಕರಿಸಿದ ಎಲ್ಲ ಸದಸ್ಯರಿಗೂ ನನ್ನ ಮನದಾಳದ ಕೃತಜ್ಞತೆಗಳು.

ಸಂಘದ ಸದಸ್ಯರೆಲ್ಲರೂ ವಾರ್ಷಿಕ ನಿರ್ವಹಣಾ ವೆಚ್ಚವನ್ನು ಪಾವತಿಸುವ ಮೂಲಕ ಸಂಘದ ಚಟುವಟಿಕೆಗಳಿಗೆ ಬೆಂಬಲವಾಗಿ ನಿಲ್ಲುವಿರೆಂಬ ನಂಬಿಕೆಯಿದೆ.

**“ಬೃಹಚ್ಚರಣ”** ದ ಮುಂದಿನ ಆವೃತ್ತಿಯು **50**ನೆಯ ಸಂಚಿಕೆಯಾಗಿದ್ದು, ಇದನ್ನು ಹೆಚ್ಚು ವಿಷಯ, ಮಾಹಿತಿ, ಲೇಖನಗಳನ್ನು ಉಳ್ಳ **“ಸ್ಮರಣ ಸಂಚಿಕೆ”** ಯಾಗಿ ಹೊರತರಲು ಕಾರ್ಯಕಾರಿ ಸಮಿತಿಯು ಯೋಚಿಸುತ್ತಿದೆ. ಇದಕ್ಕಾಗಿ ತಮ್ಮೆಲ್ಲರ ನೆರವು-ಸಹಕಾರಗಳನ್ನು ಕೋರುತ್ತೇನೆ. ವಿವರಗಳು ಪುಟ 3ರಲ್ಲಿ ಪ್ರಕಟವಾಗಿವೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ



ಅರುಣ್ ಕೆ.ಎಸ್.
ಅಧ್ಯಕ್ಷರು

## ಸಂಪಾದಕೀಯ

ಸಂಘದ ಸದಸ್ಯರು ಮತ್ತು ಕುಟುಂಬವರ್ಗದವರಿಗೆಲ್ಲ ಆದರ ಪೂರ್ವಕ ನಮಸ್ಕಾರಗಳು!

ವಿಶ್ವಾವಸು ನಾಮ ಸಂವತ್ಸರದ ಹಬ್ಬಗಳ ಸಾಲು ಆಗಲೇ ಪ್ರಾರಂಭವಾಗಿವೆ. ನಿಮ್ಮ ಕುಟುಂಬವರ್ಗದವರು ಹಾಗೂ ನೀವುಗಳು ಮುಂದಿನ ದಿನಗಳಲ್ಲಿ ಎಲ್ಲ ಹಬ್ಬ-ಹರಿದಿನಗಳನ್ನು ಸಂತಸ-ಸಡಗರಗಳಿಂದ ಆಚರಿಸಿ ದೈವಕೃಪೆಗೆ ಪಾತ್ರರಾಗುವಂತಾಗಲೆಂದು ಹಾರೈಸುತ್ತೇನೆ.

"ಬೃಹಚ್ಚರಣ"ದ 49ನೆಯ ಸಂಚಿಕೆಯನ್ನು ನಿಮ್ಮ ಕೈಗಿಡಲು ಸಂತಸವಾಗುತ್ತಿದೆ. ಇದನ್ನು ಸಹೃದಯತೆ – ಅಭಿಮಾನಗಳಿಂದ ಓದಿ ನಿಮ್ಮ ಅನಿಸಿಕೆಗಳನ್ನು ಕಳುಹಿಸಬೇಕೆಂದು ಕೋರುತ್ತೇನೆ.

ಸಂಘದ ಸದಸ್ಯರು ತಮ್ಮ ಕುಟುಂಬಗಳಲ್ಲಿ ಜರುಗುವ ಜನನ, ಉಪನಯನ, ವಿವಾಹ, ನೂತನ ಗೃಹಪ್ರವೇಶ, ಮತ್ತು ಪ್ರತಿಭಾವಂತರ ಸಾಧನೆಗಳು ಇವುಗಳ ಬಗ್ಗೆ "ಬೃಹಚ್ಚರಣ"ದಲ್ಲಿ ಪ್ರಕಟಣೆಯನ್ನು ಇಚ್ಛಿಸಿದಲ್ಲಿ ಪೂರ್ಣ ಮಾಹಿತಿಯನ್ನು (ಸಾಧ್ಯವಿದ್ದಲ್ಲಿ ಛಾಯಾಚಿತ್ರಗಳೊಡನೆ) ಇ-ಮೇಲ್ ಮೂಲಕ ಕಳಿಸಬೇಕು.

ಇ-ಮೇಲ್: **magazines@mmdbs.in**

ಎಲ್ಲರಿಗೂ ಒಳ್ಳೆಯದಾಗಲಿ!



ಬಿ. ಸುಬ್ರಹ್ಮಣ್ಯಂ
ಸಂಪಾದಕರು

ಸುದ್ದಿ ಚಿತ್ರ

## ವಿವಾಹ





**ಸಂಘದ ಸದಸ್ಯೆ ಶ್ರೀಮತಿ ಟಿ.ಎನ್. ಭಾನುಮತಿ ಮತ್ತು ಶ್ರೀ ಶ್ರೀಧರಮೂರ್ತಿ ದಂಪತಿಗಳ ಸುಪುತ್ರ ಚಿ॥ ರಾಹುಲ್ ಕೃಷ್ಣ ಅವರ ವಿವಾಹ ಮಹೋತ್ಸವವು ಶ್ರೀಮತಿ ಸಂಧ್ಯಾ ಮತ್ತು ಶ್ರೀ ನಾಗೇಶಬಾಬು ಅವರ ಸುಪುತ್ರಿ ಚಿ॥ ಲಾವಣ್ಯ ಅವರೊಡನೆ ಮೇ 25, 2025ರಂದು ಬೆಂಗಳೂರಿನಲ್ಲಿ ನೆರವೇರಿತು.**

**ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಎಸ್. ಆರ್. ವಿಜಯಕುಮಾರ್ ಮತ್ತು ಶ್ರೀಮತಿ ಲತಾ ದಂಪತಿಗಳ ಸುಪುತ್ರಿ ಚಿ॥ ರಮ್ಯಾ ಅವರ ವಿವಾಹ ಮಹೋತ್ಸವವು ಶ್ರೀಮತಿ ಶಾಂತಲಾ ಮತ್ತು ಶ್ರೀ ಕೀರ್ತಿರಾಜು ದಂಪತಿಗಳ ಸುಪುತ್ರ ಚಿ॥ ಸುಹಾಸ್ ಅವರೊಡನೆ ಜೂನ್ 16, 2025ರಂದು ಬೆಂಗಳೂರಿನಲ್ಲಿ ನೆರವೇರಿತು.**

**ಸಂಘವು ನೂತನ ದಂಪತಿಗಳಿಗೆ ದೀರ್ಘಕಾಲದ ಉಲ್ಲಾಸಮಯ ದಾಂಪತ್ಯ ಜೀವನವನ್ನು ಹಾರೈಸುತ್ತದೆ.**

## ಜನನ



ಸಂಘದ ಸದಸ್ಯೆ ಶ್ರೀಮತಿ ಎಚ್.ಜಿ. ಆಶಾ ಮತ್ತು ಶ್ರೀ ಶ್ರೇಯಸ್ ದಂಪತಿಗಳಿಗೆ ಮೇ 8, 2025ರಂದು ಹೆಣ್ಣುಶಿಶುವು ಜನಿಸಿದೆ.

## ಉಪನಯನ



ಸಂಘದ ಹಿರಿಯ ಸದಸ್ಯ ಶ್ರೀ ಎಚ್.ಡಿ. ಗಣೇಶ್ ಮತ್ತು ಶ್ರೀಮತಿ ವಸುಂಧರ ದಂಪತಿಗಳ ಪೌತ್ರ ಹಾಗು ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಎಚ್.ಜಿ. ಅರುಣ್ ಮತ್ತು ಸಾಧನಾ ದಂಪತಿಗಳ ಪುತ್ರ ಚಿ॥ ಆದ್ವಿಕ್ ನ ಉಪನಯನವು ಎಪ್ರಿಲ್ 20, 2025ರಂದು ಬೆಂಗಳೂರಿನಲ್ಲಿ ನೆರವೇರಿತು.

## LIFE-TIME ACHIEVEMENT AWARD



**ಡಾ॥ ಆರ್. ದಿವಾಕರ್**

ಸಂಘದ ಸದಸ್ಯ ಡಾ॥ ಆರ್. ದಿವಾಕರ್ ಅವರು **Electron Microscope Society of India** ಸಂಸ್ಥೆಯ **Life Time Achievement** ಪ್ರಶಸ್ತಿಗೆ ಭಾಜನರಾಗಿದ್ದಾರೆ. **``Electron Microscopy”** ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಸಲ್ಲಿಸಿದ ಉತ್ಕೃಷ್ಟ ಸೇವೆಗಾಗಿ ಶ್ರೀಯುತರಿಗೆ ಈ ಸಂಸ್ಥೆಯ 2024 ನೇ ಸಾಲಿನ ಪ್ರಶಸ್ತಿಯು ಲಭಿಸಿದೆ.




ಶ್ರೀಯುತರು **“ಇಂದಿರಾ ಗಾಂಧಿ ಅಣುವಿಜ್ಞಾನ ಸಂಶೋದನಾ ಸಂಸ್ಥೆ”** ಯಲ್ಲಿ ವಿಜ್ಞಾನಿಯಾಗಿದ್ದು ಇತ್ತೀಚೆಗೆ ನಿವೃತ್ತರಾಗಿದ್ದಾರೆ.

ಸಂಘವು ಶ್ರೀಯುತರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ ಮತ್ತು ಆರೋಗ್ಯಪೂರ್ಣ, ಶಾಂತಿಯುತ ಮತ್ತು ಕ್ರಿಯಾಶೀಲ ಜೀವನವನ್ನು ಹಾರೈಸುತ್ತದೆ.

## ಮೈ.ಮಂ.ದ್ರಾ.ಬೃಹಚ್ಚರಣ ಸಂಘ

(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)

### ಕಾರ್ಯಕಾರಿ ಸಮಿತಿ

**ಪದಾಧಿಕಾರಿಗಳು**

**ಅರುಣ್ ಕೆ.ಎಸ್., 6366037069**
ಅಧ್ಯಕ್ಷರು

**ಹೆಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು

**ಆರ್.ಎ. ಶ್ಯಾಮ್‌ಸುಂದರ್, 9845205674**
ಕಾರ್ಯದರ್ಶಿ

**ನಾಗೇಶ, 9980662118**
ಸಹ ಕಾರ್ಯದರ್ಶಿ

**ಎಸ್. ಸತ್ಯನಾರಾಯಣ, 9980945699**
ಖಜಾಂಚಿ

**ವಿ. ಅರುಣ್, 9880166001**
ಸಹ ಖಜಾಂಚಿ

**ಎನ್. ಶಿವಕುಮಾರ್, 9886505505**
ಆಂತರಿಕ ಲೆಕ್ಕ ಪರಿಶೋಧಕರು

**ಸದಸ್ಯರು**

**ಎಸ್. ಸೋಮಸುಂದರ, 9900113298**
**ಎಸ್.ಸಿ. ಶ್ರೀನಿವಾಸ, 9483725949**
**ಬಿ. ಸುಬ್ರಹ್ಮಣ್ಯಂ, 9449869667**
**ಕೆ.ಬಿ.ಎಸ್. ಶರ್ಮ, 9482087344**
**ಕೆ. ಮಂಜುನಾರಾಯಣ್, 9886114279**
**ಟಿ.ಪಿ. ಸೂರ್ಯನಾರಾಯಣ್, 9945484268**
**ಆರ್. ಗಣೇಶ್ ಶ್ರೀಧರ್, 9880187686**
**ಆರ್. ರಮೇಶ್, 9886034048**
**ಹೆಚ್.ಆರ್. ಲಲಿತಾ, 9945199637**
**ಆರ್.ಪಿ. ರವಿಶಂಕರ್, 9449696664**
**ಎಸ್.ಆರ್. ವಿಜಯಕುಮಾರ್, 9449505463**
**ಆರ್.ಎಸ್. ವೆಂಕಟೇಶ್, 9620208733**
**ಹೆಚ್.ಜಿ. ಅರುಣ್, 9845371728**
**ನಿತಿನ್ ಭಾಸ್ಕರ್, 9844417333**

**ಲೆಕ್ಕ ಪರಿಶೋಧಕರು**
**ಬಿ.ಎನ್. ಗೋವಿಂದ ಪ್ರಸಾದ್, 9845128229**

"ಬೃಹಚ್ಚರಣ" ಪತ್ರಿಕೆಯ ಸಂಪಾದಕ ಮಂಡಳಿ
**ಬಿ. ಸುಬ್ರಹ್ಮಣ್ಯಂ, 9449869667 –** ಸಂಪಾದಕರು
**ಎಸ್.ಸಿ. ಶ್ರೀನಿವಾಸ, 9483725949** – ಸದಸ್ಯರು
**ಹೆಚ್.ಆರ್. ಲಲಿತಾ, 9945199637** – ಸದಸ್ಯರು
**ಎನ್. ಶಿವಕುಮಾರ್, 9886505505** – ಛಾಯಾಗ್ರಾಹಕರು
**ಸಂಘದ ಅಧ್ಯಕ್ಷರು, 9900313929**
**ಸಂಘದ ಕಾರ್ಯದರ್ಶಿಗಳು, 9845205674**

## ಗಿರಿಜಾಕಲ್ಯಾಣ 2025

ಸಂಘದ ಕಾರ್ಯಕಾರಿ ಸಮಿತಿಯು ಬೆಂಗಳೂರು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಆವರಣದಲ್ಲಿ ಈ ವರ್ಷದ ಡಿಸೆಂಬರ್ ತಿಂಗಳ 28ನೇ ತಾರೀಖು ಭಾನುವಾರದಂದು ಗಿರಿಜಾಕಲ್ಯಾಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಇದಲ್ಲದೇ ಅಂದು ಐವತ್ತು ವರ್ಷಗಳ ದಾಂಪತ್ಯವನ್ನು ಪೂರೈಸಿದ ಬೃಹಚ್ಚರಣ ಸಮುದಾಯದ ಹಿರಿಯ ದಂಪತಿಗಳಿಗೆ ಗೌರವ ಸಲ್ಲಿಕೆ ಮತ್ತು ಸಂಘವು ಪುನರುಜ್ಜೀವನಗೊಂಡು 15 ವರುಷಗಳನ್ನು ಪೂರೈಸಿದ ಸಂದರ್ಭವನ್ನು ಆಚರಿಸುವ ಕಾರ್ಯಕ್ರಮವಿದೆ. ಅದರ ಅಂಗವಾಗಿ "ಬೃಹಚ್ಚರಣ" ಪತ್ರಿಕೆಯ 50ನೆಯ ಸಂಚಿಕೆಯನ್ನು "ಸ್ಮರಣ ಸಂಚಿಕೆಯಾಗಿ ಅಂದು ಬಿಡುಗಡೆ ಮಾಡುವ ಕಾರ್ಯಕ್ರಮವಿದೆ.

ಸಂಘದ ಸದಸ್ಯರು ಮತ್ತು ಅವರ ಪರಿವಾರವರ್ಗದವರು ಈ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದಲ್ಲದೇ ಈ ನಿಟ್ಟಿನಲ್ಲಿ ನೆರವಿನ ಹಸ್ತ ನೀಡಬೇಕೆಂದು ಸಮಿತಿಯು ಮನವಿಮಾಡಿಕೊಳ್ಳುತ್ತದೆ.

ಆರ್.ಎ. ಶ್ಯಾಮಸುಂದರ್
ಕಾರ್ಯದರ್ಶಿಗಳು

## ಸಂಘದ ಸದಸ್ಯರು ಮತ್ತು ಕುಟುಂಬವರ್ಗದವರಲ್ಲಿ ವಿಜ್ಞಾಪನೆಗಳು

ಮುಂದಿನ (ಆಗಸ್ಟ್ – ಡಿಸೆಂಬರ್ 2025) ಸಂಚಿಕೆಯನ್ನು ವಿಶೇಷ ಆವೃತ್ತಿಯಾಗಿ ಹೊರತರಲು ಉದ್ದೇಶಿಸಿದ್ದೇವೆ. ಇದಕ್ಕಾಗಿ ಸದಸ್ಯರು ಮತ್ತವರ ಕುಟುಂಬದವರಿಂದ ನಮ್ಮ ಬೃಹಚ್ಚರಣ ಸಮುದಾಯ ನಡೆದು ಬಂದ ದಾರಿ, ನಡೆ–ನುಡಿ, ಸಂಸ್ಕೃತಿ – ಸಂಪ್ರದಾಯ, ವ್ಯಕ್ತಿ–ವಿಶೇಷ ಈ ವಿಷಯಗಳ ಬಗ್ಗೆ ಲೇಖನಗಳನ್ನು ಸ್ವಾಗತಿಸುತ್ತೇವೆ. ಜೊತೆಗೆ ನಿಮ್ಮ ನೆನಪಿನಂಗಳದಿಂದ, ಜೀವನಾನುಭವದ ಮೂಸೆಯಿಂದ ಹೊರಹೊಮ್ಮಿದ, ವೈವಿಧ್ಯಮಯ ಲೇಖನಗಳಿಗೆ ಸ್ವಾಗತವುಂಟು.

ನಿಮ್ಮಗಳ ಲೇಖನಿಯಿಂದ ಮೂಡಿಬರುವ ಬರಹಗಳು ಈ ಸುವರ್ಣ ಸಂಚಿಕೆಯಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಳ್ಳಲಿ!

ಜೊತೆಗೆ, ನಿಮ್ಮಲ್ಲಿರಬಹುದಾದ ಸಂಗ್ರಹದಲ್ಲಿ ಬೃಹಚ್ಚರಣ ಪಂಗಡದ ಹಿಂದಿನ ಪೀಳಿಗೆಯ ಮಹನೀಯ–ಮಹಿಳೆಯರ, ಪರಿವಾರಗಳ ಭಾವಚಿತ್ರಗಳಿದ್ದಲ್ಲಿ ಅವುಗಳನ್ನು ಈ ಸಂಚಿಕೆಯಲ್ಲಿ ಪ್ರಕಟಣೆಗಾಗಿ ಕಳುಹಿಸಿಕೊಡಿ. ಚಿತ್ರಗಳು ಉತ್ತಮ ಸ್ಥಿತಿಯಲ್ಲಿ, ಪ್ರಕಟಿಸಲು ಯೋಗ್ಯವಾಗಿರಬೇಕು. ಮಸುಕಾದ, ಜೀರ್ಣವಾಗಿರುವ, ಕಲೆಗಳಿರುವ ಚಿತ್ರಗಳು ಅಪೇಕ್ಷಣೀಯವಲ್ಲ. ಚಿತ್ರಗಳೊಡನೆ ಸೂಕ್ತ ಶೀರ್ಷಿಕೆಗಳು ಇರಬೇಕು. ವ್ಯಕ್ತಿಗಳ ಹೆಸರುಗಳಿದ್ದಲ್ಲಿ ಪ್ರಕಟಿಸಲು ಅನುಕೂಲ.

ಅಲ್ಲದೇ, ನಮ್ಮ ಬೃಹಚ್ಚರಣ ಸಂಘದ ಅಸ್ತಿತ್ವಕ್ಕೆ ಸಂಬಂಧಿಸಿದಂತೆ ನಿಮ್ಮಬಳಿ ಇರಬಹುದಾದ ದಾಖಲೆಗಳನ್ನು (ಸೂಕ್ತ ಕಂಡಲ್ಲಿ) ಈ "ಸುವರ್ಣ ಸಂಚಿಕೆಯಲ್ಲಿ ಪ್ರಕಟಿಸಲು ಇಚ್ಛಿಸುತ್ತೇವೆ.

ಸಂ.

| ಸಂಘದ ಸದಸ್ಯತ್ವ ಶುಲ್ಕ | |
| --- | --- |
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |

# ಸಂಘದ 2024–25ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯ ವರದಿ

ಸಂಘದ 2024–25ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯು ಇದೇ ಜುಲೈ 13, ಭಾನುವಾರದಂದು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಆವರಣದಲ್ಲಿನ ಶ್ರೀ ಭ್ರಮರಾಂಬಿಕ ಸದನದಲ್ಲಿ ನಡೆಯಿತು.

ಬೆಳಿಗ್ಗೆ 8 ಘಂಟೆಗೆ ಸಂಘದ ವತಿಯಿಂದ ಶ್ರೀಗಾಯತ್ರಿ ಸದನದಲ್ಲಿ ಸಮುದಾಯದವರ ಒಳಿತು, ಏಳಿಗೆ ಮತ್ತು ಯಶಸ್ಸಿಗಾಗಿ ಶ್ರೀ ಸತ್ಯನಾರಾಯಣಸ್ವಾಮಿ ಪೂಜೆಯನ್ನು ಆಯೋಜಿಸಲಾಗಿತ್ತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಬಿ.ಎಸ್. ಶರ್ಮ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಶಶಿಕಲಾರವರು ಸಂಘದ ಪರವಾಗಿ ಪೂಜೆಯನ್ನು ಪುರೋಹಿತರಾದ ಶ್ರೀ ಸುಬ್ರಹ್ಮಣ್ಯ ಅವರ ನೇತೃತ್ವದಲ್ಲಿ ನೆರವೇರಿಸಿದರು. ಪುರೋಹಿತರು ಸಮಯೋಚಿತವಾಗಿ ಸಂಘದ ಹಾಗೂ ಸಮುದಾಯದವರ ಆರೋಗ್ಯ, ಸುಖ, ಸಂಪತ್ತು, ನೆಮ್ಮದಿ ಹಾಗೂ ಅಭಿವೃದ್ಧಿಗಾಗಿ ಮತ್ತು ಆದಿದೈವಿಕ, ಆದಿಭೌತಿಕ ಮತ್ತು ಆಧ್ಯಾತ್ಮಿಕ ತಾಪತ್ರಯಗಳ ನಿವಾರಣೆಗಾಗಿ ಸಂಕಲ್ಪ ಮಾಡಿಸಿದರು. ಸಾಂಗೋಪಾಂಗವಾಗಿ ಷೋಡಶೋಪಚಾರ ಪೂಜೆ ನಡೆಯಿತು. ಕಡೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರ ಸಮ್ಮುಖದಲ್ಲಿ ಮಹಾಮಂಗಳಾರತಿ ನಡೆದು ತೀರ್ಥ, ಸಪಾದ ಭಕ್ಷ್ಯ ಪ್ರಸಾದವನ್ನು ನೆರೆದಿದ್ದ ಸಮುದಾಯದ ಬಾಂಧವರು ಭಕ್ತಿ, ಶ್ರದ್ಧೆಯಿಂದ ಸ್ವೀಕರಿಸಿದರು. ಉಪಹಾರವಾಗಿ ಇಡ್ಲಿ, ಪೊಂಗಲ್, ಕಾಶಿಹಲ್ವ, ಕಾಫಿ ಏರ್ಪಾಡಾಗಿತ್ತು.

ಸರ್ವ ಸದಸ್ಯರ ಸಭೆಯು ಬೆಳಿಗ್ಗೆ 11 ಘಂಟೆಗೆ ಪ್ರಾರಂಭವಾಯಿತು. ಸಂಘದ ಸದಸ್ಯೆ ಶ್ರೀಮತಿ ಮಾನಸಾರವರು ಅಂದಿನ ಕಾರ್ಯಕ್ರಮವನ್ನು ನಿರೂಪಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಕೆ.ಎಸ್. ಅರುಣ್, ಕಾರ್ಯದರ್ಶಿಗಳಾದ ಶ್ರೀ ಆರ್.ಎ. ಶ್ಯಾಮ್‌ಸುಂದರ್ ಮತ್ತು ಖಜಾಂಚಿಗಳಾದ ಶ್ರೀ ಎಸ್. ಸತ್ಯನಾರಾಯಣರವರನ್ನು ವೇದಿಕೆಗೆ ಆಹ್ವಾನಿಸಲಾಯಿತು. ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎನ್. ರವಿಕಿರಣ್‌ರವರ ಪ್ರಾರ್ಥನೆ ಕಾರ್ಯಕ್ರಮಕ್ಕೆ ನಾಂದಿಯಾಯಿತು. ಅವರಿಗೆ ಧನ್ಯವಾದ ಪೂರ್ವಕವಾಗಿ ನೆನಪಿನ ಕಾಣಿಕೆಯನ್ನು ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಎಸ್. ಸೋಮಸುಂದರರವರು ನೀಡಿದರು.

ಕಳೆದ ಸಾಲಿನಲ್ಲಿ ಸಮ್ಮನ್ನಗಲಿದ ನಮ್ಮವರ ಹೆಸರುಗಳನ್ನು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ವಿಜಯಕುಮಾರ್‌ರವರು ಸಭೆಗೆ ಓದಿ ಹೇಳಿದರು. ಅಗಲಿದ ಚೇತನಗಳಿಗೆ ಒಂದು ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಹೆಚ್.ಜಿ. ಅರುಣ್‌ರವರು ವಿನೂತನ ಶೈಲಿಯಲ್ಲಿ ಸಜ್ಜುಗೊಳಿಸಿದ್ದ ಸ್ವಾಗತ ಭಾಷಣದ ಮೂಲಕ ನೆರೆದಿದ್ದ ಹಿರಿಯ ಚೇತನರನ್ನು, ಪ್ರತಿಭಾ ಪುರಸ್ಕೃತರನ್ನು ಮತ್ತು ಸಭಿಕರನ್ನು ಸ್ವಾಗತಿಸಿದರು.

ಸಂಘದ ಪೋಷಕರಾದ ಡಾ॥ ಶ್ರೀ ವಿ. ಛಾಯಾಪತಿರವರು ಶ್ರೀ ಶೃಂಗೇರಿ ಶಂಕರಮಠದ ಪೀಠಸ್ಥರ ಆದೇಶದ ಮೇರೆಗೆ ಇಂದಿನ ಬ್ರಾಹ್ಮಣ ಯುವ ಪೀಳಿಗೆಗೆ ಅನುಕೂಲವಾಗುವಂತೆ ನಿತ್ಯಕರ್ಮವಾದ ಸಂಧ್ಯಾವಂದನಾ ಕ್ರಮ ಮತ್ತು ಅದರ ಅರ್ಥಸಹಿತ ಆಂಗ್ಲ ಭಾಷೆಯಲ್ಲಿ ರಚಿಸಿ, ಮುದ್ರಿಸಿ, ಬಿಡುಗಡೆಗಾಗಿ ತಂದಿದ್ದರು. ಶ್ರೀಯುತರು ಸಭೆಗೆ ಈ ಪುಸ್ತಕದ ಪರಿಚಯವನ್ನು ಮಾಡಿಕೊಟ್ಟರು. ನಂತರ ಸಂಘದ ಪದಾಧಿಕಾರಿಗಳ ಸಮ್ಮುಖದಲ್ಲಿ ಪುಸ್ತಕ ಬಿಡುಗಡೆ ಆಯಿತು.

ಪ್ರಾಸ್ತಾವಿಕ ನುಡಿಯಲ್ಲಿ ಅಧ್ಯಕ್ಷರಾದ ಶ್ರೀ ಕೆ.ಎಸ್. ಅರುಣ್‌ರವರು ಬೃಹಚ್ಚರಣದ ಎಲ್ಲಾ ಸದಸ್ಯ ಮತ್ತು ಸಮುದಾಯದ ಬಂಧು ಮಿತ್ರರಿಗೆ ವಾರ್ಷಿಕ ಸರ್ವಸದಸ್ಯ ಸಭೆಗೆ ಸುಸ್ವಾಗತ ಕೋರಿದರು. ಅಧ್ಯಕ್ಷರು ಸಭೆಯಲ್ಲಿ ಮಾತನಾಡುತ್ತಾ ಸದಸ್ಯರು ಸಂಘದ ಜಾಲತಾಣ (WEB SITE–mmdbs.in) ಬಳಸಿ ಉಪಯೋಗಪಡಿಸಿಕೊಳ್ಳಬೇಕು, ಪ್ರತಿಭಾ ಪುರಸ್ಕೃತರು ಸದಸ್ಯರಾಗಬೇಕು, ವಾರ್ಷಿಕ ನಿರ್ವಹಣಾ ವೆಚ್ಚ (AMF) ಎಲ್ಲರೂ ಪಾವತಿಸಬೇಕು, ಸದಸ್ಯರೆಲ್ಲರೂ ಸಂಘದ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಮತ್ತು ಸಂಘಕ್ಕೆ ಉದಾರವಾಗಿ ದೇಣಿಗೆ ನೀಡಿದರೆ ಸಂಘವು ಇನ್ನೂ ಹೆಚ್ಚು ಕಾರ್ಯಕ್ರಮ ಹಮ್ಮಿಕೊಳ್ಳಲು ಸಹಕಾರಿಯಾಗುತ್ತದೆ ಎಂದರು. ಸಂಘದ ಅಡಿಯಲ್ಲಿ ಮಹಿಳಾ ಮತ್ತು ಯುವ ವಿಭಾಗಗಳನ್ನು ಆರಂಭಿಸಬೇಕೆಂಬ ಉದ್ದೇಶವಿದೆ ಎಂದು ತಿಳಿಸಿದರು.

ನಂತರ ಸಂಘದ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಕಾರ್ಯದರ್ಶಿಗಳಾದ ಶ್ರೀ ಶ್ಯಾಮ್‌ಸುಂದರರವರು ಮಂಡಿಸಿ ಕಳೆದ ಸಾಲಿನಲ್ಲಿ ಸಂಘ ಹಮ್ಮಿಕೊಂಡ ಕಾರ್ಯಚಟುವಟಿಕೆಗಳನ್ನು ವಿಷದವಾಗಿ ಸಭೆಗೆ ತಿಳಿಸಿದರು.

ಕಳೆದ ಸಾಲಿನ ಆಯ–ವ್ಯಯ ಪತ್ರವನ್ನು ಖಜಾಂಚಿ ಶ್ರೀ ಸತ್ಯನಾರಾಯಣರವರು ಮಂಡಿಸಿದರು. ಈ ಮೊದಲೇ ಸದಸ್ಯರಿಗೆ ಆಯ–ವ್ಯಯ ಪತ್ರ ವರದಿ ಪ್ರತಿ ನೀಡಲಾಗಿತ್ತು. ಸಂಘದ ಆದಾಯವು ಒಂದು ಕೋಟಿ ಹತ್ತು ಲಕ್ಷ ರೂ. ಗಳಷ್ಟು

ತಲುಪಿರುವುದನ್ನು ಅವರು ತಿಳಿಸಿದಾಗ ಸದಸ್ಯರೆಲ್ಲಾ ಸಂತೋಷದಿಂದ ಹರ್ಷೋದ್ಗಾರ ಮಾಡಿದರು. ಇದೇ ಸಂದರ್ಭದಲ್ಲಿ ಸದಸ್ಯರೆಲ್ಲಾ ವಾರ್ಷಿಕ ನಿರ್ವಹಣಾ ವೆಚ್ಚ ನೀಡಬೇಕೆಂದು ಮನವಿ ಮಾಡಿದರು. ಸಭೆಯಲ್ಲಿ ಸದಸ್ಯರು ಕೈ ಎತ್ತುವ ಮೂಲಕ ಆಯ–ವ್ಯಯ ಪತ್ರಕ್ಕೆ ಅನುಮೋದನೆ ನೀಡಿದರು. ಸಂಘದ ಲೆಕ್ಕ ಪರಿಶೋಧಕರಾದ ಶ್ರೀ ಬಿ.ಎನ್.ಜಿ. ಪ್ರಸಾದ್‌ರವರು ಲೆಕ್ಕ–ಪತ್ರಗಳ ವಿಷಯವನ್ನು ವಿವರಿಸುತ್ತಾ ಸಂಘದ ಆರ್ಥಿಕ ಸ್ಥಿತಿಯು ಆರೋಗ್ಯಕರವಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಮಹಾ ಪೋಷಕರಾದ ಶ್ರೀಮತಿ ಅಂಜನಿ ನಂದಕಿಶೋರ್, ಸಮುದಾಯದ ಹಿರಿಯರಾದ ಶ್ರೀಮತಿ ಗಾಯತ್ರಿ ಶ್ರೀನಿವಾಸ್, ಹಿಂದಿನ ಕಾರ್ಯದರ್ಶಿಗಳು ಮತ್ತು ಮಹಾ ಪೋಷಕರಾದ ಶ್ರೀ ವಿ.ಎಸ್. ಮಣಿ. ಹಿರಿಯ ಸದಸ್ಯ ಶ್ರೀ ಎನ್.ವಿ. ಸುಂದರ್, ಹಿರಿಯ ಸದಸ್ಯ ಶ್ರೀ ಜಿ.ಎಸ್. ಸತ್ಯಮೂರ್ತಿ, ಮತ್ತು ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸರಸ್ವತಿ ನಟರಾಜನ್‌ರವರು ತಮ್ಮ ಅನಿಸಿಕೆ, ಅಭಿಪ್ರಾಯ ತಿಳಿಸಿದರು. ಬೃಹಚ್ಚರಣ ಪತ್ರಿಕೆಯ ಹಿಂದಿನ ಸಂಪಾದಕರಾದ ಶ್ರೀ ಕೆ.ಎಸ್. ಮಧುಸೂದನರವರು ಸಂಘ ಪ್ರಾರಂಭವಾದ ಬಗ್ಗೆ ದಿನಾಂಕ ಮುಂತಾದವುಗಳನ್ನು ದಾಖಲೆ ಸಮೇತ ಸಭೆಗೆ ತಿಳಿಸಿದರು.

"ಬೃಹಚ್ಚರಣ" ಪತ್ರಿಕೆ ಸಂಪಾದಕರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸುಬ್ರಹ್ಮಣ್ಯಂರವರು ಪತ್ರಿಕೆಯ 50ನೇ ಸಂಚಿಕೆಯನ್ನು ಸುವರ್ಣ ಸಂಚಿಕೆಯಾಗಿ ವಿಶೇಷ ರೂಪದಲ್ಲಿ ಹೊರತರುವ ಉದ್ದೇಶವನ್ನು ಸಭೆಗೆ ತಿಳಿಸಿ ಇದಕ್ಕಾಗಿ ಸದಸ್ಯರಿಂದ ಲೇಖನಗಳನ್ನು ಆಹ್ವಾನಿಸಿದರು.

ಪೋಷಕರು, ಹಿಂದಿನ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಸೋಮಸುಂದರರವರು ಬೃಹಚ್ಚರಣ ಭಾಷೆಯಲ್ಲಿ ತಮ್ಮ ನುಡಿಯನ್ನು ಪ್ರಾರಂಭಿಸಿದರು. ಸಂಘಕ್ಕಾಗಿ ಶ್ರಮಿಸಿದ ಹಿರಿಯರನ್ನು ನೆನೆದರು. ಸಂಘವು ಎಲ್ಲರ ಸಹಕಾರದಿಂದ ಈವರೆಗೆ ಬೆಳೆದು ಬಂದಿದೆ ಎಂದರು. ಸಂಘಕ್ಕೆ ಸದಸ್ಯರು ಉದಾರವಾಗಿ ದೇಣಿಗೆ ನೀಡಲು ಕೋರಿದರು

ಅಧ್ಯಕ್ಷರು ಅಭಿನಂದನೆಗಳನ್ನು ಸ್ವೀಕರಿಸುತ್ತಾ ಸಲಹೆ, ಸೂಚನೆಗಳನ್ನು ಧನಾತ್ಮಕವಾಗಿ ಸ್ವೀಕರಿಸಿ ಮುಂಬರುವ ದಿನಗಳಲ್ಲಿ ಕಾರ್ಯರೂಪಕ್ಕೆ ತರುವುದಾಗಿ ತಿಳಿಸಿದರು. **"ಈವರೆಗೆ ಸಮುದಾಯದವರಿಗೆ ನೀಡಲಾಗುತ್ತಿದ್ದ ಪ್ರತಿಭಾ ಪುರಸ್ಕಾರ, ಸಾಂತ್ವನ ನಿಧಿಯನ್ನು ಮುಂದೆ ಸದಸ್ಯರು ಮತ್ತು ಅವರ ಕುಟುಂಬಗಳಿಗೆ ಮಾತ್ರ ಸೀಮಿತ ಮಾಡಿರುವ ಯೋಜನೆಯನ್ನು ಸಭೆಗೆ ತಿಳಿಸಿದರು."**

ಕಾರ್ಯಕ್ರಮವನ್ನು ಮುಂದುವರೆಸುತ್ತಾ 75 ವಸಂತಗಳನ್ನು ಪೂರೈಸಿದ ಸಮುದಾಯದ 13 ಹಿರಿಯ ಚೇತನರನ್ನು (ಪತ್ನಿ / ಪತಿ ಸಮೇತ) ಶಾಲು ಹೊದಿಸಿ, ದೀಪದ ಜೊತೆ, ತಟ್ಟೆ, ಡ್ರೈ ಫ್ರೂಟ್ಸ್, ಮಂಗಳದ್ರವ್ಯ ಸಹಿತ ಗೌರವಿಸಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಆರ್.ಎಸ್. ವೆಂಕಟೇಶ್‌ರವರು ಹಿರಿಯ ದಂಪತಿಗಳ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಈ ಎಲ್ಲ ಹಿರಿಯರು ತಮ್ಮ ಕುಟುಂಬ ವರ್ಗದವರೊಂದಿಗೆ ಈ ಸಂತೋಷದ ಘಳಿಗೆಯನ್ನು ಹಂಚಿಕೊಂಡರು.

ನಂತರ ಸಂಘಕ್ಕೆ ಉದಾರವಾಗಿ ದೇಣಿಗೆ ನೀಡಿ ಸಂಘವನ್ನು ಪ್ರೋತ್ಸಾಹಿಸುತ್ತಿರುವ ಕೆಲವು ದಾನಿಗಳಾದ ಶ್ರೀಯುತರಾದ ಶ್ರೀಹರಿ ಉಡುಪ, ಆರ್.ಎಸ್. ವೆಂಕಟೇಶ್, ಎಸ್. ಸೋಮಸುಂದರ, (ದಂಪತಿ ಸಮೇತ), ಕೆ.ಸಿ. ಶೇಖರ್ ಮತ್ತು ಆರ್.ಎನ್. ಕುಮಾರ್‌ರವರನ್ನು (ಶಾಲು ಹೊದಿಸಿ, ಡ್ರೈಫ್ರೂಟ್ಸ್ ನೀಡುವ ಮೂಲಕ) ಕಾರ್ಯಕಾರಿ ಸಮಿತಿಯ ಸದಸ್ಯರು ಧನ್ಯವಾದಪೂರ್ವಕವಾಗಿ ಗೌರವಿಸಿದರು. ಈವರೆಗೆ ಸಂಘಕ್ಕೆ ಉದಾರವಾಗಿ ಮತ್ತು ಸಮಯಕ್ಕೆ ಸರಿಯಾಗಿ ಲೆಕ್ಕ–ಪತ್ರ ಪರಿಶೋಧನೆ ಮಾಡುತ್ತಿರುವ ಶ್ರೀ ಬಿ.ಎನ್.ಜಿ. ಪ್ರಸಾದ್‌ರವರನ್ನು ಶ್ರೀಮತಿಯವರ ಸಮೇತ ಗೌರವಿಸಲಾಯಿತು.

ಕಳೆದ ಶೈಕ್ಷಣಿಕ ವರ್ಷದಲ್ಲಿ ಉತ್ತಮ ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನು ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಆಂತರಿಕ ಲೆಕ್ಕ ಪರಿಶೋಧಕರಾದ ಶ್ರೀ ಶಿವಕುಮಾರ್‌ರವರು ಸಭೆಗೆ ಪರಿಚಯಿಸಿದರು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ತರಗತಿಗಳಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ಅಂಗವಾಗಿ ಬ್ಯಾಕ್ ಪ್ಯಾಕ್ ಬ್ಯಾಗ್, ಸಪ್ನಾ ಬುಕ್ ಹೌಸ್‌ನ ರೂ 2500/– ಗಳ ಕೂಪನ್ ಮತ್ತು ಸಂಘದಿಂದ ವಿಶೇಷವಾಗಿ ರೂಪಿಸಿದ ಅಭಿನಂದನಾ ಪತ್ರಗಳನ್ನು ನೀಡುತ್ತಾ ಅವರ ಭವಿಷ್ಯ ಉಜ್ವಲವಾಗುವಂತೆ ಆಶಿಸಲಾಯಿತು. ಜೊತೆಗೆ "ಎಲ್ಲರೊಳಗೊಂದಾಗು–ಮಕ್ಕಳಿಗಾಗಿ ಡಿ.ವಿ.ಜಿ." ಎಂಬ ಪುಸ್ತಕವನ್ನು ಪ್ರತಿಯೊಬ್ಬ ಪುರಸ್ಕೃತರಿಗೂ ನೀಡಲಾಯಿತು. ಪದವಿ, ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿ ಉತ್ತಮ ಅಂಕಗಳನ್ನು ಪಡೆದ ಪ್ರತಿಭೆಗಳಿಗೆ ಬ್ಯಾಕ್ ಪ್ಯಾಕ್ ಬ್ಯಾಗ್, "ಎಲ್ಲರೊಳಗೊಂದಾಗು–ಮಕ್ಕಳಿಗಾಗಿ ಡಿ.ವಿ.ಜಿ." ಪುಸ್ತಕ, ಮತ್ತು ಅಭಿನಂದನಾ ಪತ್ರಗಳನ್ನು ನೀಡಲಾಯಿತು. ಪ್ರತಿಭಾ ಪುರಸ್ಕೃತರು ತಮ್ಮ ಹೆತ್ತವರು, ಪೋಷಕರು, ಬಂಧು ವರ್ಗದವರ ಜೊತೆ ಸಂತಸದ ಕ್ಷಣಗಳನ್ನು ಹಂಚಿಕೊಂಡರು.

ಕಳೆದ ವರ್ಷ ನವರಾತ್ರಿ ಹಬ್ಬದ ಸಂದರ್ಭದಲ್ಲಿ ತಮ್ಮ ಮನೆಗಳಲ್ಲಿ ದಸರಾ ಬೊಂಬೆಗಳನ್ನು ಪ್ರದರ್ಶಿಸಿದ್ದ ಸಮುದಾಯದವರಿಗೆ ಪ್ರೋತ್ಸಾಹಪೂರ್ವಕವಾಗಿ ಕಿರುಕಾಣಿಕೆಯನ್ನು ನೀಡಲಾಯಿತು. ಕಾರ್ಯಕ್ರಮ ನಿರೂಪಿಸಿದ ಶ್ರೀಮತಿ ಮಾನಸರವರಿಗೆ ಧನ್ಯವಾದ ಪೂರ್ವಕವಾಗಿ ಕಿರುಕಾಣಿಗೆ ನೀಡಲಾಯಿತು. ಸರ್ವ ಸದಸ್ಯರ ಸಭೆಯ ಕಡೆಯಲ್ಲಿ ಸಮುದಾಯದ 300 ಕ್ಕೂ ಹೆಚ್ಚು ಸದಸ್ಯರಿಗೆ ಭೋಜನ ಏರ್ಪಾಡಾಗಿತ್ತು. ಜೊತೆಗೆ ಬಂದವರಿಗೆಲ್ಲಾ ಸಿಹಿ–ಖಾರ ಪೊಟ್ಟಣಗಳನ್ನು ನೀಡಲಾಯಿತು. ಖಜಾಂಚಿ ಮತ್ತು ಸಂಘದ ಮಹಾಪೋಷಕ ಶ್ರೀ ಸತ್ಯನಾರಾಯಣರವರು ತಮ್ಮ 65ನೇ ಹುಟ್ಟುಹಬ್ಬದ ಪ್ರಯುಕ್ತವಾಗಿ ಭೋಜನ ಸಮಯದಲ್ಲಿ ಬಡಿಸಲಾದ ಪೇಣಿ ಭಕ್ಷ್ಯವನ್ನು ಪ್ರಾಯೋಜಿಸಿದ್ದರು. ಶ್ರೀ ಸತ್ಯನಾರಾಯಣರವರಿಗೆ, ಕಾರ್ಯಕ್ರಮದ ಛಾಯಾಚಿತ್ರಗಳನ್ನು ಸೆರೆಹಿಡಿದ ಹಿರಿಯ ಸದಸ್ಯ ಮತ್ತು ಬೃಹಚ್ಚರಣ ಪತ್ರಿಕೆಯ ಹಿಂದಿನ ಸಂಪಾದಕ ಶ್ರೀ ಕೆ.ಸಿ. ನಟರಾಜನ್‌ರವರಿಗೆ ಮತ್ತು "ಎಲ್ಲರೊಳಗೊಂದಾಗು–ಮಕ್ಕಳಿಗಾಗಿ ಡಿ.ವಿ.ಜಿ." ಪುಸ್ತಕದ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದ ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಹಾಗೂ ಸಂಘದ ಮಹಾಪೋಷಕರಾದ ಶ್ರೀಮತಿ ಮತ್ತು ಶ್ರೀ ರಮೇಶ್ ದಂಪತಿಗಳು ಇವರುಗಳಿಗೆ ಕಾರ್ಯಕಾರಿ ಸಮಿತಿಯು ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತದೆ.

ಉಪಾಧ್ಯಕ್ಷರಾದ ಶ್ರೀ ಶಶಿಧರ್‌ರವರು ವಂದನಾರ್ಪಣೆ ಮಾಡಿ ಸರ್ವಸದಸ್ಯರ ಸಭೆ ಯಶಸ್ವಿಯಾಗಿ ನೆರವೇರಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದ ತಿಳಿಸಿದರು.



**ಹೆಚ್. ಆರ್. ಲಲಿತಾ**
9945199637

## ನಮ್ಮ ಸಮುದಾಯದ ಪ್ರತಿಭೆಗಳು



ಬೃಹಚ್ಚರಣ ಸಂಘದ ಹಿರಿಯ ಸದಸ್ಯರಾದ ಶ್ರೀ ಕೆ. ಸಿ. ಜಯರಾಮ್ ಅವರು ಜೂನ್ 01 2025ರಂದು ಭಾರತೀಯ ನಾದ ಸೌರಭದ ವಾರ್ಷಿಕ **"ಶ್ಯಾಮಲಾ ಭಾವೆ ಸ್ಮೃತಿ ಸನ್ಮಾನ"** ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಶ್ರೀಯುತರು ಕರ್ನಾಟಕ ಸಂಗೀತ ಮತ್ತು ಹಿಂದುಸ್ಥಾನಿ ಸಂಗೀತ ಪದ್ಧತಿಯಲ್ಲಿ ಸಾಧನೆ ಮಾಡಿರುತ್ತಾರೆ. ಸಂಗೀತ ವಿದೂಷಿ ಶ್ರೀಮತಿ ಶ್ಯಾಮಲಾ ಭಾವೆಯರಿಗೆ ಪಕ್ಕವಾದ್ಯದಲ್ಲಿ ಹಾಗೂ ಅವರ ಸಂಗೀತ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿರುತ್ತಾರೆ. ಜೊತೆಗೆ ಅನೇಕ ಪ್ರತಿಷ್ಠಿತ ಸಂಗೀತ ಕಾರ್ಯಕ್ರಮಗಳಲ್ಲಿ ಪಕ್ಕವಾದ್ಯದಲ್ಲಿ ಸಹಕರಿಸಿರುತ್ತಾರೆ.



ಸಂಘದ ಸದಸ್ಯ ಆರ್.ಬಿ. ಅಜಯ್‌ರವರ ಪತ್ನಿ ಶ್ರೀಮತಿ ಲಕ್ಷ್ಮಿ ಶ್ರೀ ಅವರು ಸಮಾಜಸೇವೆ ಕ್ಷೇತ್ರದಲ್ಲಿ ಸಲ್ಲಿಸಿರುವ ಅನುಪಮ ಸೇವೆಗಾಗಿ ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯು ನೀಡಿರುವ **"50ನೆಯ ವಾರ್ಷಿಕ ಅಂತರ–ರಾಷ್ಟ್ರೀಯ ಆರ್ಯಭಟ ಪ್ರಶಸ್ತಿ"ಗೆ** ಇಲ್ಲಿ ಭಾಜನರಾಗಿರುತ್ತಾರೆ. ಮೇ 22, 2025ರಂದು ತನ್ನ ಸುವರ್ಣಮಹೋತ್ಸವವನ್ನು ಆಚರಿಸಿಕೊಂಡ ಸಂದರ್ಭದಲ್ಲಿ ಆ ಸಂಸ್ಥೆಯು ಶ್ರೀಮತಿಯವರನ್ನು ಗೌರವಿಸಿದೆ.

ಸಂಘದ ಸದಸ್ಯ ಹಾಗೂ ಲಯವಾದ್ಯ ವಿದ್ವಾನ್ ಶ್ರೀ ಆರ್. ಕಾರ್ತೀಕ್ ಅವರನ್ನು ಬೆಂಗಳೂರಿನ **"ಅನನ್ಯ ಕಲ್ಚರಲ್ ಅಕ್ಯಾಡೆಮಿ"** ಸಂಸ್ಥೆಯು ಭಾನುವಾರ ಜೂನ್ 15, 2025ರಂದು **"ಅನನ್ಯ ಯುವ ಪುರಸ್ಕಾರ–2025"** ಪ್ರಶಸ್ತಿ ನೀಡಿ ಗೌರವಿಸಿದೆ.

**ಸಂಘವು ಈ ಪ್ರತಿಭಾವಂತರನ್ನು ಅಭಿನಂದಿಸುತ್ತಾ ಇವರುಗಳು ಈ ಕ್ಷೇತ್ರಗಳಲ್ಲಿ ಉನ್ನತಿಯನ್ನು ಸಾಧಿಸಲೆಂದು ಹಾರೈಸುತ್ತದೆ.**

# ನವರಾತ್ರಿ – ಜಗಜ್ಜನನಿಯ ನವವಿಧಸ್ವರೂಪಗಳ ಆರಾಧನೆಯ ಹಬ್ಬ




ಮನುಷ್ಯರ ಎಲ್ಲ ಕಷ್ಟಗಳನ್ನು ನೀಗಿ, ಅಭಯವನ್ನಿತ್ತು ಸಲಹುವ ಜಗನ್ಮಾತೆಯ ಒಂಬತ್ತು ದಿನಗಳ ಸುದೀರ್ಘ ಆರಾಧನೆಯೇ ನವರಾತ್ರಿ ಉತ್ಸವ. ಆಶ್ವಯುಜ ಮಾಸದ ಶುಕ್ಲ ಪಕ್ಷದ ಪ್ರತಿಪದ (ಪಾಡ್ಯ) ದಿಂದ ಆರಂಭ ಆಗುವ ಪೂಜೆಯು ನವಮಿ ಪರ್ಯಂತ ಪ್ರತೀ ದಿನ ದೇವಿಯ ಒಂದೊಂದು ವಿಶಿಷ್ಟ ಸ್ವರೂಪಕ್ಕೆ ಆರಾಧನೆ ನಡೆಸಲಾಗುತ್ತದೆ. ಲೋಕ ಕಂಟಕರಾದ ರಾಕ್ಷಸರ ಸಂಹಾರ ಮಾಡಿ, ಜಗತ್ತಿನ ಉದ್ಧಾರ ಮಾಡುವ ಜಗಜ್ಜನನಿಯ ನವವಿಧ ಸ್ವರೂಪವನ್ನು ನಾವು ಇಲ್ಲಿ ಆರಾಧಿಸಬಹುದು. ಈ ನವ ರೂಪಗಳನ್ನು ಒಂದೊಂದನ್ನಾಗಿ ಇಲ್ಲಿ ಸ್ಥೂಲವಾಗಿ ಪರಿಚಯಿಸಲಾಗಿದೆ. ಸ್ನಾನಾದಿ ನಿತ್ಯ ಶುದ್ಧಿ ನಂತರ ಮನೆಯ ಈಶಾನ್ಯದಲ್ಲಿ ಅಥವಾ ದೇವರ ಮನೆಯಲ್ಲಿ ರಂಗೋಲಿಯಲ್ಲಿ ಅಷ್ಟದಳ ಬರೆದು, ಅದರ ಮೇಲೆ ಕಲಶ ಸ್ಥಾಪನೆ ಮಾಡಿ, ಆ ಕಲಶದಲ್ಲಿ ಗಂಧ ಸಹಿತ ಶುದ್ಧ ನೀರನ್ನು ತುಂಬಿಸಿ, ನವರಾತ್ರಿಯ ಒಂದೊಂದು ದಿನವೂ ಒಂದೊಂದು ದೇವಿ ಸ್ವರೂಪದ ಆರಾಧನೆ ಮಾಡಬೇಕು.

**1. ಶೈಲಪುತ್ರಿ ಸ್ವರೂಪ ಆರಾಧನೆ : ನವರಾತ್ರಿ ಮೊದಲ ದಿನ**

**ವಂದೇ ವಾಂಛಿತಲಾಭಾಯ ಚಂದ್ರಾರ್ಧಕೃತ ಶೇಖರಾಂ। ವೃಷಾರೂಢಾಂ ಶೂಲಧರಾಂ ಶೈಲಪುತ್ರೀಂ ಯಶಸ್ವಿನೀಂ॥**

ನವರಾತ್ರಿಯ ಮೊದಲ ದಿನದ ದೇವಿಯ ಆರಾಧನೆಯ ಸ್ವರೂಪ ಶೈಲಪುತ್ರಿ.. ಶೈಲ ಎಂದರೆ ಪರ್ವತ. ಶೈಲಪುತ್ರಿ ಅಂದರೆ ಪರ್ವತ ರಾಜನ ಪುತ್ರಿ ಪಾರ್ವತಿ ಎಂದರ್ಥವಾಗುತ್ತದೆ. ಪುರಾಣಗಳ ಪ್ರಕಾರ ಸೃಷ್ಟಿಕರ್ತನಾದ ಬ್ರಹ್ಮನಿಗೆ ಅವನ ಕಾರ್ಯಕ್ಕೆ ಮಧು – ಕೈಟಭ ಎಂಬ ರಾಕ್ಷಸರಿಂದ ಅಡಚಣೆ ಉಂಟಾಗುತ್ತದೆ. ಆಗ ಯೋಗನಿದ್ರಾಸ್ವರೂಪದ ಈ ದೇವಿಯು ಮಹಾವಿಷ್ಣುವಿನಿಂದ ರಾಕ್ಷಸದ್ವಯರ ಸಂಹಾರವಾಗುವಂತೆ ಕರುಣಿಸುತ್ತಾಳೆ.

ನವರಾತ್ರಿಯ ಮೊದಲ ದಿನ ಕಲಶದಲ್ಲಿ ಯೋಗನಿದ್ರಾ ಸ್ವರೂಪದ ದೇವಿಯನ್ನು ಆವಾಹನೆ ಮಾಡಿ, ಧ್ಯಾನಿಸಿ ಪೂಜಿಸಬೇಕು.

**2. ದ್ವಿತೀಯಂ ಬ್ರಹ್ಮಚಾರಿಣಿ: ನವರಾತ್ರಿ ಎರಡನೇ ದಿನ**

**ಹಂಸಾರೂಢಾಂ ಶುಕ್ಲ ವರ್ಣಾಂ ಶುಕ್ಲಮಾಲ್ಯಾದ್ಯಲಂಕೃತಾಂ ಚತುರ್ಭುಜಾಂ ಸೃಕ್ಸ್ರುವೌ ಚ ಕಮಂಡಲ್ವಕ್ಷಮಾಲಿಕಾಂ**

**ಬಿಭ್ರತೀಂ ಪೂಜಯೇದ್ದೇವೀಂ ದ್ವಿತೀಯಾಯಾಂ ಸದಾನೃಪ**

**ಪೂಜಾವಿಧಿ:** ರಂಗೋಲಿಯಲ್ಲಿ ಅಷ್ಟದಳವನ್ನು ಬಿಡಿಸಿ, ಕಲಶ ಸ್ಥಾಪನೆ ಮಾಡಿ, ಆ ಕಲಶದಲ್ಲಿ ಮೇಲಿನ ಶ್ಲೋಕದೊಂದಿಗೆ ಬ್ರಹ್ಮಚಾರಿಣಿ ದೇವಿಯನ್ನು ಆವಾಹನೆ ಮಾಡಿ ಧ್ಯಾನಿಸಬೇಕು. ಪೂಜೆಯಲ್ಲಿ ಸುಗಂಧಭರಿತ ಶ್ವೇತ ಪುಷ್ಪಗಳಿಗೆ ಆದ್ಯತೆ.

ಭಗವತಿಯ ಈ ಸ್ವರೂಪದ ಆರಾಧನೆಯಿಂದ ದೊರಕುವ ಪ್ರಮುಖವಾದ ಫಲ ಎಂದರೆ, ಅಶಕ್ತರು ಸಶಕ್ತರಾಗುತ್ತಾರೆ. ಯಾರ ಸಹಾಯವೂ ದೊರೆಯದೆ ಜೀವನದಲ್ಲಿ ಕಷ್ಟ ಪಡುತ್ತ ಇರುವವರಿಗೆ ಈ ದೇವಜಾತಾ ಸ್ವರೂಪಿಣಿಯ ಆರಾಧನೆಯಿಂದ ಅನಿರೀಕ್ಷಿತ ಸಹಾಯಗಳು ಲಭಿಸುತ್ತವೆ. ಇನ್ನು ಬೆಳಿಗ್ಗೆ ಪೂಜೆಯ ನಂತರ ಸಂಧ್ಯಾ ಸಮಯದಲ್ಲಿ ಮುತ್ತೈದೆಯರಿಗೆ ಅರಿಶಿನ– ಕುಂಕುಮವನ್ನು ಅಥವಾ ಬಾಗಿನವನ್ನು ಕೊಡುವುದರಿಂದ ಪೂರ್ಣಫಲ ಸಿಗುತ್ತದೆ.

### 3. ದುರ್ಗೆಯ ಸ್ವರೂಪ ಚಂದ್ರಘಂಟಾ: ನವರಾತ್ರಿ ಮೂರನೇ ದಿನ

**ಪಿಂಡಜಪ್ರವರಾರೂಢಾ ಚಂಡಕೋಪಾಸ್ತ್ರಕೈರ್ಯುತಾ । ಪ್ರಸಾದಂ ತನುತೇ ಮಹ್ಯಂ ಚಂದ್ರಘಂಟೇತಿ ವಿಶ್ರುತಾ ॥**

ಶರನ್ನವರಾತ್ರಿಯ ಮೂರನೇ ದಿನ ಆ ಮಹಾಶಕ್ತಿ ದುರ್ಗೆಯ ಸ್ವರೂಪವನ್ನು ಚಂದ್ರಘಂಟಾ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಚಂದ್ರಘಂಟಾ ದೇವಿಯನ್ನು ಚಂದ್ರಿಕಾ, ರಣಚಂಡಿ ಎಂದೂ ಕರೆಯುತ್ತಾರೆ. ಆ ದೇವಿಯ ವಿಗ್ರಹವನ್ನು ಇರಿಸಿ, ಪೂಜೆ– ಆರಾಧನೆಯನ್ನು ಮಾಡಲಾಗುತ್ತದೆ. ಈ ದೇವಿಯ ಸ್ವರೂಪವು ಶಾಂತ ರೀತಿಯಲ್ಲಿ ಇದ್ದು, ಶ್ರೇಯಸ್ಸನ್ನು ನೀಡುತ್ತದೆ.

**ಪೂಜಾ ವಿಧಿ:** ಚಂದ್ರಘಂಟಾ ದೇವಿಗೆ ಮಲ್ಲಿಗೆ ಹೂವು ಅರ್ಪಿಸಿ, ಪೂಜೆ ಮಾಡಿ ಹಾಗೂ ಭಕ್ತಿಯಿಂದ ಧ್ಯಾನ ಮಾಡಬೇಕು. ಇದರ ಜತೆಗೆ 16 ಬಗೆಯ ಅರ್ಪಣೆ ನೀಡಿ ಆರತಿ ಮಾಡಬೇಕು. ಚಂದ್ರಘಂಟಾ ದೇವಿಯು ಧೈರ್ಯ, ಪರಾಕ್ರಮ ಹಾಗೂ ಸೌಂದರ್ಯದ ಪ್ರತೀಕವಾಗಿದ್ದು, ಕೆಂಪು ಬಣ್ಣದ ಬಟ್ಟೆಯ ಅಲಂಕಾರ ಮಾಡಿದಲ್ಲಿ ಆ ತಾಯಿಯು ಆರಾಧಕರ ಕುಟುಂಬಕ್ಕೆ ಶ್ರೇಯಸ್ಸನ್ನು ನೀಡುತ್ತಾಳೆ. ಅಲ್ಲದೆ, ಕೆಂಪು ಬಣ್ಣದ ಹೂವುಗಳಿಂದ ಪೂಜೆ ಮಾಡಲಾಗುತ್ತದೆ.

ಚಂದ್ರಘಂಟಾ ದೇವಿಯ ಆರಾಧನೆಯನ್ನು ಯಾರು ಮಾಡುತ್ತಾರೋ ಅಂಥವರ ಸಕಲ ಪಾಪಗಳು ನಶಿಸಿ ಹೋಗುತ್ತವೆ. ಆ ತಾಯಿ ತನ್ನ ಭಕ್ತರ ಕೋರಿಕೆಗಳನ್ನು ಕ್ಷಿಪ್ರವಾಗಿ ಪೂರೈಸುತ್ತಾಳೆ. ಆಕೆಯ ವಾಹನ ಸಿಂಹದಂತೆ ಆರಾಧಕನಾದವನಿಗೆ ಪರಾಕ್ರಮ ಬರುತ್ತದೆ, ನಿರ್ಭಯ ಆಗುತ್ತಾನೆ. ಚಂದ್ರಘಂಟಾ ದೇವಿಯ ಆ ಧ್ವನಿಯ ಮಾತ್ರದಿಂದಲೇ ಪ್ರೇತಬಾಧೆ ಮೊದಲಾದವುಗಳಿಂದ ರಕ್ಷಣೆ ದೊರೆಯುತ್ತದೆ. ಆಕೆಯ ಧ್ಯಾನದಿಂದಲೇ ಹಲವು ಕಷ್ಟಗಳು ನಿವಾರಣೆ ಆಗುತ್ತವೆ. ಅಂದಹಾಗೆ, ಚಂದ್ರಘಂಟಾ ದೇವಿಯು ಶುಕ್ರ ಗ್ರಹದ ಅಧಿದೇವತೆ ಆಗಿದ್ದು, ಭೂಮಿಯ ಮೇಲಿರುವ ಎಲ್ಲ ಜೀವಿಗಳಿಗೂ ಸಂತೋಷ ನೀಡುವ ತಾಯಿ ಆಕೆ. ದೇವಿಯ ಆರಾಧನೆಯಿಂದ ಸಂಪತ್ತು, ಸಮೃದ್ಧಿ ದೊರೆಯುತ್ತದೆ. ತಾಯಿಯ ಆಶೀರ್ವಾದದಿಂದ ಮನೆಯಲ್ಲಿ ಯಾವತ್ತಿಗೂ ಆಹಾರದ ಕೊರತೆ ಬಾರದು.

### 4. ಯಶಸ್ಸು ಕರುಣಿಸುವ ಕೂಷ್ಮಾಂಡಾ: ನವರಾತ್ರಿ ನಾಲ್ಕನೇ ದಿನ

**ಸುರಾಸಂಪೂರ್ಣಕಲಶಂ ರುಧಿರಾಪ್ಲುತಮೇವ ಚ। ದಧಾನಾ ಹಸ್ತಪದ್ಮಾಭ್ಯಾಂ ಕೂಷ್ಮಾಂಡಾ ಶುಭದಾಸ್ತು ಮೇ ॥**

ಮತ್ತೊಂದು ಉಲ್ಲೇಖ "ತ್ರಿವಿಧತಾಪಯುಕ್ತಃ ಸಂಸಾರಃ ಸ ಅಂಡೇ ಮಾಂಸಪೇಶ್ಯಾಮ್ ಉದರರೂಪಾಯಂ ಯಸಾಃ ಸಾ ಕೂಷ್ಮಾಂಡಾ" ಎಂದಿದೆ. ತ್ರಿವಿಧ ತಾಪ ಅಂದರೆ ಸೃಷ್ಟಿ, ಸ್ಥಿತಿ ಹಾಗೂ ಲಯ. ಇಲ್ಲಿ ಲಯ ಅಂದರೆ ಯಾವುದೇ ನಿಶ್ಚಿತ ಕಾಲ ಎಂಬುದು ಇಲ್ಲದೆ ನಾಶವಾಗುವಂಥದ್ದು. ಈ ಸಂಸಾರ ಅಂದರೆ ಪುನಃ ಪುನಃ ಎಂದಾಗುತ್ತದೆ. ಅಂಡಃ ಎಂಬುದಕ್ಕೆ ವಿಶಿಷ್ಟ ನಿಯಂತ್ರಣದಿಂದ ಯುಕ್ತವಾಗಿರುವ ಕೋಶ. ಯಾರು ಮಾಂಸ, ಜೀವಕೋಶದಿಂದ ಉದರ ಹಾಗೂ ರೂಪ ಇವುಗಳಿಂದ ಯುಕ್ತ ಸಂಪನ್ನರಾಗಿರುತ್ತಾರೋ ಮೇಲೆ ತಿಳಿಸಿದ ಮೂರು ಬಗೆಯ ತಾಪದಿಂದ ಪುನರಾವೃತ್ತಿಯ ಅವಸ್ಥೆ ಕಾರಣಕ್ಕೆ ಮತ್ತೆ ಮತ್ತೆ ಹೋಗುತ್ತಾರೆ. ಈ ಪ್ರಕ್ರಿಯೆಯಿಂದ ಬಿಡುಗಡೆ ಆಗಬೇಕು ಎಂದುಕೊಳ್ಳುವವರಿಗೆ ಯಾರ ಅನುಗ್ರಹ ಬೇಕೋ ಆಕೆಯೇ ಕೂಷ್ಮಾಂಡಾ. ಕೂಷ್ಮಾಂಡಾ ಅಂದರೆ ಸಂಸ್ಕೃತದಲ್ಲಿ ಕುಂಬಳಕಾಯಿ. ಈ ತಾಯಿಗೆ ಕುಂಬಳಕಾಯಿಯನ್ನು ಬಲಿ ನೀಡುವುದೇ ಹೆಚ್ಚು ಪ್ರಿಯ. ಆ ಕಾರಣದಿಂದಲೂ ಕೂಷ್ಮಾಂಡಾ ಎಂಬ ಹೆಸರು ಬಂದಿದೆ.

ನವರಾತ್ರಿಯ ನಾಲ್ಕನೇ ದಿನ ಯಾರು ಕೂಷ್ಮಾಂಡಾ ದೇವಿಯನ್ನು ಆರಾಧಿಸುತ್ತಾರೋ ಅಂಥವರ ಋಣ, ದಾರಿದ್ರ್ಯ, ರೋಗ, ಶೋಕಗಳು ದೂರವಾಗುತ್ತವೆ. ಆ ದೇವಿಯ ಅನುಗ್ರಹದಿಂದ ಆಯುಷ್ಯ, ಯಶಸ್ಸು, ಬಲ ಮತ್ತು ಆರೋಗ್ಯದ

ವೃದ್ಧಿ ಆಗುತ್ತದೆ. ಯಥಾಶಕ್ತಿಯಿಂದ ಕೂಷ್ಮಾಂಡಾ ದೇವಿಯನ್ನು ಆರಾಧನೆ ಮಾಡಿದಲ್ಲಿ ಆಕೆ ಒಲಿಯುತ್ತಾಳೆ, ಸಂಸಾರ ಬಂಧದಿಂದ ಮುಕ್ತರಾಗಲು, ವ್ಯಾಧಿ– ಬಾಧೆಗಳಿಂದ ದೂರವಾಗಲು ಅನುಗ್ರಹಿಸುತ್ತಾಳೆ.

**5. ಸ್ಕಂದಮಾತೆಯ ಕೃಪಾದೃಷ್ಟಿ: ನವರಾತ್ರಿ ಐದನೇ ದಿನ**

**ಸಿಂಹಾಸನ ಗತಾನಿತ್ಯಂ ಪದ್ಮಾಶ್ರಿತ ಕರದ್ವಯಾ । ಶುಭದಾಸ್ತು ಸದಾದೇವೀ ಸ್ಕಂದಮಾತಾ ಯಶಸ್ವಿನೀ॥**

ಈ ತಾಯಿಯ ಸ್ವರೂಪ ಈ ದಿನ ಹೇಗಿರುತ್ತದೆ ಅಂದರೆ, ಸ್ಕಂದನು ಬಾಲರೂಪದಲ್ಲಿ ಆಕೆಯ ತೊಡೆಯ ಮೇಲೆ ಕುಳಿತಿರುತ್ತಾನೆ.

ಮಕ್ಕಳು ಇಲ್ಲದ ದಂಪತಿ – ಸಂತಾನವನ್ನು ಪಡೆಯುವ ಬಯಕೆ ಇರುವಂಥವರು ಈ ಶರನ್ನವರಾತ್ರಿಯ ಐದನೇ ದಿನದಂದು ಈ ವ್ರತ ಆಚರಿಸಬೇಕು. ಸ್ಕಂದಮಾತೆಗೆ ಬಾಳೆಹಣ್ಣು ಮತ್ತು ಅದರಿಂದ ಮಾಡಿದ ವಸ್ತುಗಳನ್ನು ಅರ್ಪಿಸಬೇಕು. ಇದರಿಂದ ಆ ತಾಯಿ ಸಂತುಷ್ಟಳಾಗುತ್ತಾಳೆ.

ಆರಾಧನೆ ಮಾಡುವವರು ಈ ದಿನ ಮನಸ್ಸನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳುವುದು ಬಹಳ ಮುಖ್ಯ. ಯಾವುದೇ ಕಾರಣದಿಂದಲೂ ಏಕಾಗ್ರತೆ ಕಳೆದುಕೊಳ್ಳಬಾರದು. ಸ್ಕಂದಮಾತಾ ಸ್ವರೂಪದಲ್ಲಿ ದೇವಿಯ ಆರಾಧನೆ ಮಾಡಿದಾಗ ಮನಸ್ಸಿನ ಕೋರಿಕೆಗಳು ಈಡೇರುತ್ತವೆ. ಶಾಂತಿ, ನೆಮ್ಮದಿ ದೊರೆಯುತ್ತದೆ. ಸ್ಕಂದಮಾತಾ ಆರಾಧನೆಯ ವಿಶೇಷ ಏನೆಂದರೆ, ತಾಯಿಯ ಕೈಂಕರ್ಯದ ಜೊತೆಜೊತೆಗೆ ಬಾಲರೂಪಿಯಾದ ಸ್ಕಂದನ ಆರಾಧನೆ ಸಹ ಮಾಡಿದಂತಾಗುತ್ತದೆ.

**6. ಸೌಭಾಗ್ಯ ನೀಡುವ ಕಾತ್ಯಾಯಿನಿ: ನವರಾತ್ರಿ ಆರನೇ ದಿನ**

**ಚಂದ್ರಹಾಸೋಜ್ಜ್ವಲಕರಾ ಶಾರ್ದೂಲವರವಾಹನಾ। ಕಾತ್ಯಾಯನೀ ಶುಭಂ ದದ್ಯಾತ್ ದೇವೀ ದಾನವಘಾತಿನೀ॥**

ಯಾರು ಕಾತ್ಯಾಯಿನಿ ದೇವಿಯನ್ನು ಶ್ರದ್ಧಾ– ಭಕ್ತಿಪೂರ್ವಕವಾಗಿ ಆರಾಧನೆ ಮಾಡುತ್ತಾರೋ ಅಂಥವರಿಗೆ ಧರ್ಮ–ಅರ್ಥ–ಕಾಮ್ಯ–ಮೋಕ್ಷ ಹೀಗೆ ಚತುರ್ವಿಧ ಫಲ ಪುರುಷಾರ್ಥಗಳು ಸಹ ದೊರೆಯುತ್ತವೆ. ರೋಗ, ಶೋಕ, ದುಃಖ, ದಾರಿದ್ರ್ಯಗಳು ದೂರವಾಗುತ್ತವೆ. ಅಷ್ಟೇ ಅಲ್ಲ, ಜನ್ಮಜನ್ಮಾಂತರದ ಪಾಪಗಳು ನಾಶವಾಗುತ್ತವೆ. ಇಹ ಲೋಕದಲ್ಲಿ ದೇವಿಯ ಆರಾಧಕರು ಅಲೌಕಿಕವಾದ ತೇಜಸ್ಸು, ಕಾಂತಿ, ಸಮಾಧಾನ–ಸಂತೃಪ್ತಿಯನ್ನು ಕಾಣುತ್ತಾರೆ. ಈ ದೇವಿಯ ಆರಾಧನೆಯಿಂದಾಗಿ ಭಯವು ದೂರವಾಗಿ ಧೈರ್ಯ ಸಂಚಯನ ಆಗುತ್ತದೆ, ಏನನ್ನಾದರೂ ಸಾಧಿಸುವ ಅಚಲ ವಿಶ್ವಾಸ ಸಹ ಮೂಡುತ್ತದೆ. ಆದ್ದರಿಂದ ದೇವಿಯನ್ನು ಕಾತ್ಯಾಯಿನಿ ರೂಪದಲ್ಲಿ ಆರಾಧನೆ ಮಾಡುವ ಮೂಲಕ ಸಕಲ ಸೌಭಾಗ್ಯವನ್ನೂ ಪಡೆಯಿರಿ!

**7. ಪಾಪಗಳನ್ನು ಸಂಹರಿಸುವ ಕಾಲರಾತ್ರಿ: ನವರಾತ್ರಿ ಏಳನೇ ದಿನ**

**ಏಕವೇಣೀ ಜಪಾಕರ್ಣಪೂರಾ ನಗ್ನ ಖರಾಸ್ಥಿತಾ । ಲಂಬೋಷ್ಠೀ ಕರ್ಣಿಕಾಕರ್ಣೀ ತೈಲಾಭ್ಯಕ್ತ ಶರೀರಿಣೀ ॥**

**ವಾಮಪಾದೋಲ್ಲಸಲ್ಲೋಹಲತಾಕಂಟಕ ಭೂಷಣಾ ವರ್ಧನಮೂರ್ಧಧ್ವಜಾ ಕೃಷ್ಣಾ ಕಾಲರಾತ್ರಿರ್ಭಯಂಕರೀ ॥**

ಶರನ್ನವರಾತ್ರಿಯ ಏಳನೇ ದಿನದಂದು ತಾಯಿಯ ಸ್ವರೂಪವನ್ನು ಕಾಲರಾತ್ರಿ ಎಂದು ಕರೆಯಲಾಗುತ್ತದೆ. ಕಾಲರಾತ್ರಿಯ ಸ್ವರೂಪದಲ್ಲಿ ದುರ್ಗೆಯು ಭಯಂಕರವಾಗಿ ಕಾಣುತ್ತಾಳೆ. ಆದರೆ ಫಲವನ್ನು ನೀಡುವ ವಿಚಾರಕ್ಕೆ ಬಂದಲ್ಲಿ ಸದಾ ಶುಭಫಲಗಳನ್ನೇ ನೀಡುವವಳಾಗಿದ್ದಾಳೆ. ಆದ್ದರಿಂದ ಆಕೆಯನ್ನು ಶುಭಂಕರೀ ಎಂದು ಸಹ ಕರೆಯಲಾಗುತ್ತದೆ. ಭಕ್ತರು ಅಥವಾ ಆರಾಧಕರು ತಾಯಿಯ ಸ್ವರೂಪಕ್ಕೆ ಹೆದರುವ ಅಗತ್ಯವೇ ಇಲ್ಲ. ನವರಾತ್ರಿಯ ಏಳನೇ ದಿನ ಕಾಲರಾತ್ರಿಯ ಆರಾಧನೆ ಮಾಡುವುದರೊಂದಿಗೆ ಆರಾಧಕರಿಗೆ ಎದುರಾಗುವ, ಎದುರಾಗಿರುವ ಸಕಲ ಪಾಪ, ಅಡೆ–ತಡೆಗಳು ನಾಶವಾಗುತ್ತವೆ. ಅಕ್ಷಯವಾದಂಥ, ಅಂದರೆ ಕೊನೆಯೇ ಇಲ್ಲದಂಥ ಪುಣ್ಯಫಲಗಳು ದೊರೆಯುತ್ತವೆ.

ಕಾಲರಾತ್ರಿ ದೇವಿ ಕೂಡ ದುಷ್ಟರು, ರಾಕ್ಷಸರನ್ನು ನಾಶ ಮಾಡುತ್ತಾಳೆ. ಈ ದೇವಿಯ ಸ್ಮರಣೆ ಮಾತ್ರದಿಂದಲೇ ಭೂತ–ಪ್ರೇತ, ರಾಕ್ಷಸರು ಮೊದಲಾದ ದುಷ್ಟರ ಸಮಸ್ಯೆಗಳು ಕರಗಿ ಹೋಗುತ್ತವೆ. ತಾಯಿಯ ಸ್ಮರಣೆಯಿಂದಾಗಿ ಗ್ರಹಬಾಧೆಗಳು

ಕೂಡ ದೂರವಾಗುತ್ತವೆ. ಯಾರು ಶ್ರದ್ಧಾ–ಭಕ್ತಿಯಿಂದ ಕಾಲರಾತ್ರಿ ದೇವಿಯನ್ನು ಆರಾಧನೆ ಮಾಡುತ್ತಾರೋ ಅಂಥವರಿಗೆ ಬೆಂಕಿಯಿಂದ ಎದುರಾಗುವ ಆತಂಕ, ನೀರಿನಿಂದ ಎದುರಾಗುವ ಬಾಧೆಗಳು, ಪ್ರಾಣಿ– ಪಕ್ಷಿ, ಕ್ರಿಮಿ– ಕೀಟಗಳಿಂದ ಎದುರಾಗಬಹುದಾದ ಬಾಧೆಗಳು ಸಹ ದೂರವಾಗುತ್ತವೆ. ಇನ್ನು ಯಾವುದೇ ಭಯಗಳು ಇಲ್ಲದೆ ಸದಾ ಉಲ್ಲಸಿತರಾಗಿ, ಆಧ್ಯಾತ್ಮಿಕ ಸಂತೋಷದಿಂದ ಇರಬಹುದಾಗಿದೆ. ಕಾಲರಾತ್ರಿಯು ಇದೇ ಸ್ವರೂಪದಲ್ಲೇ ಶುಂಭ, ನಿಶುಂಭರೆಂಬ ಕ್ರೂರಿ ರಾಕ್ಷಸರನ್ನು ನಾಶ ಮಾಡಿದ್ದು. ಆದ್ದರಿಂದ ಆ ದೇವಿಯನ್ನು ತಾಯಿಯಂತೆ ಕಂಡು ಆರಾಧನೆ ಮಾಡಿದಲ್ಲಿ ಎಲ್ಲ ಪಾಪ ವಿನಾಶವಾಗುತ್ತದೆ, ಶತ್ರುಗಳು ಇಲ್ಲದಂತಾಗುತ್ತಾರೆ, ಪಾಪದಿಂದ ಮುಕ್ತರಾಗುತ್ತೇವೆ.

### 8. ಅಲೌಕಿಕ ಸಿದ್ಧಿಗಳನ್ನು ನೀಡುವ ಮಹಾಗೌರೀ: ನವರಾತ್ರಿ ಎಂಟನೇ ದಿನ

**ಶ್ವೇತೇ ವೃಷಾ ಸಮಾರೂಢಾ ಶ್ವೇತಾಂಬರಾ ಧರಾ ಶುಚಿಃ। ಮಹಾಗೌರೀ ಶುಭಂ ದದ್ಯಾತ್ ಮಹಾದೇವಪ್ರಮೋದದಾ॥**

ನವರಾತ್ರಿ ಎಂಟನೇ ದಿನ ತಾಯಿಯ ಸ್ವರೂಪವು ಮಹಾಗೌರೀ ಎಂದಾಗಿರುತ್ತದೆ. ಶರನ್ನವರಾತ್ರಿಯ ಎಂಟನೇ ದಿನದಂದು ಮಹಾಗೌರೀ ಆರಾಧನೆ ಮಾಡುವುದರಿಂದ ಸಕಲ ಸಂಚಿತ ಪಾಪಗಳು ನಿವಾರಣೆ ಆಗುತ್ತವೆ. ಅಷ್ಟೇ ಅಲ್ಲ, ಅಲ್ಲಿಂದ ಮುಂದೆ ಪಾಪ–ಸಂತಾಪ, ದುಃಖ, ದೈನ್ಯಾದಿಗಳು ಬರುವುದಿಲ್ಲ. ಯಾರು ಈ ದೇವಿಯನ್ನು ಶ್ರದ್ಧಾ–ಭಕ್ತಿಯಿಂದ ಆರಾಧನೆ ಮಾಡುತ್ತಾರೋ ಎಂದಿಗೂ ಕರಗದ ಪುಣ್ಯಕ್ಕೆ ಅಧಿಪತಿಗಳಾಗುತ್ತಾರೆ. ಮಹಾಗೌರೀಯ ವಿಶೇಷ ಏನೆಂದರೆ, ಯಾರೂ ಏಕಾಗ್ರತೆಯಿಂದ ಈಕೆಯನ್ನು ಧ್ಯಾನ ಮಾಡುತ್ತಾರೋ ಅಂಥವರಿಗೆ ಅಲೌಕಿಕ ಸಿದ್ಧಿಗಳು ಪ್ರಾಪ್ತಿ ಆಗುತ್ತವೆ. ಭಕ್ತರ ಅದೆಂಥದ್ದೇ ಕಷ್ಟಗಳಿದ್ದರೂ ಅವಳು ದೂರ ಮಾಡುತ್ತಾಳೆ. ಯಾವ ಕೆಲಸ ಆಗುವುದೇ ಇಲ್ಲ ಎಂದು ಭಕ್ತರು ಅಂದುಕೊಂಡಿರುತ್ತಾರೋ ಅಂಥ ಕೆಲಸಗಳು ಸಹ ಸರಾಗವಾಗಿ ಆಗುತ್ತವೆ. ಪುರಾಣಗಳಲ್ಲಿ ಈ ದೇವಿಯ ಮಹಿಮೆಯನ್ನು ತುಂಬ ಚೆನ್ನಾಗಿ ವಿವರಿಸಲಾಗಿದೆ. ಮನುಷ್ಯರಲ್ಲಿ ಇರುವಂಥ ಪ್ರವೃತ್ತಿಯನ್ನು ಉತ್ತಮದ ಕಡೆಗೆ ಒಯ್ಯುವ ಹಾಗೂ ಸಾಗುವ ಕಡೆಗೆ ಮನಸ್ಸು ನೀಡುವವಳು ಅದೇ ಮಹಾಗೌರೀ. ಆದ್ದರಿಂದ ಆ ದೇವಿಯಲ್ಲಿ ಶರಣಾಗತರಾಗಬೇಕು. ಹೀಗೊಂದು ಶರಣಾಗತ ಭಾವ ಮೂಡುವುದರಿಂದ ಆ ದೇವಿಯೇ ನಮ್ಮನ್ನು ರಕ್ಷಿಸುತ್ತಾಳೆ, ಪೊರೆಯುತ್ತಾಳೆ ಹಾಗೂ ಸರಿಯಾದ ಮಾರ್ಗದಲ್ಲಿ ನಡೆಯುವುದಕ್ಕೆ ಪ್ರೇರಣೆ ಸಹ ನೀಡುತ್ತಾಳೆ.

### 9. ಸಿದ್ಧಿ ಪ್ರದಾನಿಸುವ ಸಿದ್ಧಿದಾತ್ರೀ: ನವರಾತ್ರಿ ಒಂಬತ್ತನೇ ದಿನ

**ಸಿದ್ಧಗಂಧರ್ವಯಕ್ಷಾದ್ಯೈ ರಸುರೈರಮರೈರಪಿ । ಸೇವ್ಯಮಾನಾ ಸದಾಭೂಯಾತ್ ಸಿದ್ಧಿದಾ ಸಿದ್ಧಿದಾಯಿನೀ ॥**

ನವರಾತ್ರಿಯ ಒಂಬತ್ತನೇ ದಿನ ದೇವಿಯ ಸ್ವರೂಪದ ಹೆಸರು ಸಿದ್ಧಿದಾತ್ರೀ. ಹೆಸರೇ ಸೂಚಿಸುವಂತೆ ಸಿದ್ಧಿಯನ್ನು ಅನುಗ್ರಹಿಸುವವಳು ಅಥವಾ ನೀಡುವವಳು ಈ ಮಹಾತಾಯಿ. ಮಾರ್ಕಂಡೇಯ ಪುರಾಣದ ಪ್ರಕಾರ ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಮ್ಯ, ಈಶಿತ್ವ ಹಾಗೂ ವಶಿತ್ವ ಹೀಗೆ ಎಂಟು ಸಿದ್ಧಿಗಳನ್ನು ಹೇಳಲಾಗಿದೆ.

ಜಗಜ್ಜನನಿಯನ್ನು ಆರಾಧನೆ ಮಾಡುವುದರಿಂದ, ಅದರಲ್ಲೂ ಶರನ್ನವರಾತ್ರಿಯ ಒಂಬತ್ತನೇ ದಿನದಂದು ಸಿದ್ಧಿದಾತ್ರೀ ಸ್ವರೂಪದಲ್ಲಿ ಆರಾಧಿಸುವುದರಿಂದ ಈ ಎಲ್ಲ ಸಿದ್ಧಿಗಳು ಪ್ರಾಪ್ತವಾಗುತ್ತವೆ. ಯಾರು ಶರನ್ನವರಾತ್ರಿಯ ಒಂಬತ್ತನೇ ದಿನದಂದು ಈ ಸಿದ್ಧಿದಾತ್ರೀ ದೇವಿಯ ಆರಾಧನೆ ಮಾಡುತ್ತಾರೋ ಅಂಥವರಿಗೆ ಎಲ್ಲ ಸಿದ್ಧಿಗಳನ್ನು ಆ ತಾಯಿ ಅನುಗ್ರಹಿಸುತ್ತಾಳೆ. ಈ ಸೃಷ್ಟಿಯಲ್ಲಿ ಆ ವ್ಯಕ್ತಿಗೆ ನಿಲುಕಲಾರದ್ದು ಎಂಬುದು ಯಾವುದೂ ಇರುವುದಿಲ್ಲ.

ನವರಾತ್ರಿಯಲ್ಲಿ ದೇವಿಯ ಒಂಬತ್ತು ಸ್ವರೂಪಗಳನ್ನು ವಿವರಿಸುತ್ತ ಕೊನೆಯದಾಗಿ ಬರುವುದು ಸಿದ್ಧಿದಾತ್ರೀ ದೇವಿ ಸ್ವರೂಪವಾಗಿದೆ. ಉಳಿದ ಎಂಟು ದಿನಗಳಂತೆ ಒಂಬತ್ತನೇ ದಿನದಂದು ಸಹ ಈ ದೇವಿಯ ಆರಾಧನೆ ಮಾಡುವುದರಿಂದ ಆರಾಧಕರ ಲೌಕಿಕ–ಪಾರಮಾರ್ಥಿಕ ಎಲ್ಲ ಬಗೆಯ ಕೋರಿಕೆಗಳು ನೆರವೇರುತ್ತವೆ. ಆ ಭಗವತಿ ಸಿದ್ಧಿದಾತ್ರೀ ದೇವಿ ಅನುಗ್ರಹಿಸಿದ ಮೇಲೆ ಬೇರೆ ಯಾವ ಕೃಪೆ, ಅನುಗ್ರಹ, ರಕ್ಷಣೆ ಆ ಆರಾಧಕರಿಗೆ ಅಗತ್ಯವಿರುವುದಿಲ್ಲ.



ನವದುರ್ಗೆಯರ ಎಲ್ಲ ಸ್ವರೂಪವನ್ನು ಹಾಗೂ ಮಹಿಮೆಯನ್ನು ತಿಳಿದುಕೊಂಡು ಆರಾಧಿಸುವ ಎಲ್ಲರಿಗೂ ಮಂಗಳವಾಗಲಿ!

**ಶಶಿಧರ್ ಹೆಚ್.ಕೆ**
98451 73766

ಛಾಯಾಗ್ರಹಣ : ಕೆ.ಸಿ. ನಟರಾಜನ್

# ಸತ್ಯನಾರಾಯಣ ಪೂಜೆ (13-7-2025)












ಛಾಯಾಗ್ರಹಣ : ಕೆ.ಸಿ. ನಟರಾಜನ್

# ಸರ್ವಸದಸ್ಯರ ಸಭೆ (13-07-2025)











ಛಾಯಾಗ್ರಹಣ : ಕೆ.ಸಿ. ನಟರಾಜನ್

# ಸರ್ವಸದಸ್ಯರ ಸಭೆ (13-07-2025)









ಸಂಘದ ಹಿರಿಯ ಸದಸ್ಯರಾದ ಶ್ರೀ ವಿ. ಛಾಯಾಪತಿ ಅವರು ರಚಿಸಿರುವ "Daily Sandhyavandanam" ಪುಸ್ತಕದ ಬಿಡುಗಡೆ.

ಛಾಯಾಗ್ರಹಣ : ಕೆ.ಸಿ. ನಟರಾಜನ್

## ಸರ್ವಸದಸ್ಯರ ಸಭೆ (13-07-2025)











## ಸಂಘದ ಹಿತೈಷಿಗಳು ಮತ್ತು ದಾನಿಗಳಿಗೆ ಗೌರವ (13-7-2025)




ಛಾಯಾಗ್ರಹಣ : ಕೆ.ಸಿ. ನಟರಾಜನ್

# ಹಿರಿಯ ಚೇತನರಿಗೆ ಗೌರವ (13-07-2025)



ಸನ್ಮಾನ್ಯರಾದ ಎಚ್. ಪಿ. ಸೂರ್ಯಕುಮಾರಿ (ಮತ್ತು ಆರ್. ಭಗವಾನ್), ಕೆ. ಶ್ರೀಕಂಠೇಶ್ವರ್ (ಮತ್ತು ಎಸ್. ಪದ್ಮಾವತಿ), ಕೆ. ಎಸ್. ಮಧುಸೂದನ್ (ಮತ್ತು ಎನ್. ನಾಗರತ್ನ)



ಸನ್ಮಾನ್ಯರಾದ ರುಕ್ಮಿಣಿ (ಮತ್ತು ಕೆ. ಜಿ. ಶ್ರೀನಿವಾಸ್), ಆರ್. ಶ್ರೀನಿವಾಸ್ (ಮತ್ತು ಗಾಯತ್ರಿ), ಕೆ. ಎಸ್. ಶ್ರೀನಿವಾಸನ್



ಸನ್ಮಾನ್ಯರಾದ ಎಸ್.ವಿ. ಜಗದೀಶ್ (ಮತ್ತು ಶ್ರೀಮತಿಯವರು) ಎನ್. ನಾಗರಾಜ್ (ಮತ್ತು ಉಮಾ), ಕೆ. ಬಿ. ಎಸ್. ಶರ್ಮ (ಮತ್ತು ಶಶಿಕಲಾ)

ಛಾಯಾಗ್ರಹಣ : ಕೆ.ಸಿ. ನಟರಾಜನ್

# ಹಿರಿಯ ಚೇತನರಿಗೆ ಗೌರವ (13-07-2025)



ಸನ್ಮಾನ್ಯರಾದ ಎಸ್. ಸರಸ್ವತಿ (ಮತ್ತು ಎ. ವಿ. ಶ್ರೀನಿವಾಸನ್), ಸೀತಾಲಕ್ಷ್ಮಿ ಮತ್ತು ಸರಸ್ವತಿ



ಸನ್ಮಾನ್ಯರಾದ ಶ್ರೀ ಕೃಷ್ಣಸ್ವಾಮಿ ಛಾಯಾಪತಿ



ಸಂಘದ ಲೆಕ್ಕಪರಿಶೋಧಕರಾದ ಸನ್ಮಾನ್ಯ ಬಿ.ಎನ್. ಗೋವಿಂದ ಪ್ರಸಾದ್ ಅವರಿಗೆ (ಶ್ರೀಮತಿಯವರೊಡನೆ) ಸನ್ಮಾನ

ಛಾಯಾಗ್ರಹಣ : ಕೆ.ಸಿ. ನಟರಾಜನ್

# ಪ್ರತಿಭಾ ಪುರಸ್ಕಾರ (13-07-2025



ಎಸ್.ಎಸ್.ಎಲ್.ಸಿ. : ಸಮಾಹಿತ ಎಸ್. ಸಾತ್ವಿಕ್, ಅಮೋಘ್ ಆರ್. ಭಾರದ್ವಾಜ್, ಆರ್. ಗಣೇಶ್, ಜಿ. ಸಿ. ಶ್ರೀರಾಮ್, ಸುಮಂತ್ ಮುಗಳೂರು



ಪಿ.ಯು.ಸಿ. : ಅಭಯ್ ಗಣೇಶ್, ಸಮಿತ್ ಶಶಿಧರ್, ಕೆ. ಎ. ವಲ್ಲರಿ, ಪ್ರಿಯಾ ದೇಶಪಾಂಡೆ, ಸ್ನೇಹ ಕೌಂಡಿನ್ಯ



ಪದವಿ ಮತ್ತು ಉನ್ನತ ಶಿಕ್ಷಣ : ಡಾ॥ ಸಂಜನಾ ಶೈಲೇಶ್, ಎನ್. ಶ್ರೇಯಸ್, ಕೌಸ್ತುಭ್ ವಿಶ್ವನಾಥ್, ರಕ್ಷಾ ಉಮಾಶಂಕರ್

ಛಾಯಾಗ್ರಹಣ : ಕೆ.ಸಿ. ನಟರಾಜನ್

# ದಸರಾ ಬೊಂಬೆ ಪ್ರದರ್ಶಿಸಿದ್ದ ಸದಸ್ಯರಿಗೆ ನೆನಪಿನ ಕಾಣಿಕೆ











# ಪ್ರತಿಭಾ ಪುರಸ್ಕಾರ



ಸಿರಿ ಮಂಜುನಾಥ್, ಪಿ.ಯು.ಸಿ.

ಛಾಯಾಗ್ರಹಣ : ಕೆ.ಸಿ. ನಟರಾಜನ್

# ಸರ್ವಸದಸ್ಯರ ಸಭೆ – ಭೋಜನ ಸಮಯ







ಛಾಯಾಗ್ರಹಣ : ಕೆ.ಸಿ. ನಟರಾಜನ್

# ಸರ್ವಸದಸ್ಯರ ಸಭೆ (13-07-2025)





# ಯಜುರ್ ಉಪಾಕರ್ಮ ಆಚರಣೆ (09-08-2025) - ವರದಿ

ಬೃಹಚ್ಚರಣ ಸಂಘವು ಮೊದಲಬಾರಿಗೆ ಈ ವರ್ಷ ಸಮುದಾಯದವರಿಗಾಗಿ ಯಜುರ್ವೇದ ಉಪಾಕರ್ಮವನ್ನು ಆಯೋಜಿಸಿತ್ತು. ಉಪಾಕರ್ಮ ಅಂದರೆ ಆರಂಭ. ಇದು ವೇದ ಅಧ್ಯಯನದ ಆಚರಣೆಗೆ ಬದ್ಧತೆಯ (commitment ನ) ಪ್ರಾರಂಭವನ್ನು ಸೂಚಿಸುತ್ತದೆ. ಬ್ರಾಹ್ಮಣರು ಉಪಾಕರ್ಮದ ದಿನ ವೇದಗಳ ಅಧ್ಯಯನ ಮಾತ್ರವಲ್ಲದೆ, ಶ್ರೌತ ಕರ್ಮಗಳೊಂದಿಗೆ ಉಪನಯನ ಸಂಸ್ಕಾರವನ್ನು ಆಚಾರಬದ್ಧವಾಗಿ ಪುನರಾವೃತ್ತಿ ಮಾಡುತ್ತಾರೆ. ಉಪಾಕರ್ಮ ಎಂಬುದು ಇಂದು ಕೂಡ ಬ್ರಾಹ್ಮಣ ಸಮುದಾಯದವರು ಆಚರಿಸುವ ವೈದಿಕ ಆಚರಣೆಯಾಗಿದೆ. ಯಜುರ್ವೇದವನ್ನು ಅನುಸರಿಸುವವರು ಶ್ರಾವಣಮಾಸದ ಪೌರ್ಣಿಮೆಯಂದು ಉಪಾಕರ್ಮವನ್ನು ಆಚರಿಸುತ್ತಾರೆ.

ಈ ಆಚರಣೆಯು ಈ ತಿಂಗಳ 9ನೇ ತಾರೀಖು ಶನಿವಾರದಂದು ಸಂಘದ ವತಿಯಿಂದ ಶ್ರೀಮಲ್ಲಿಕಾರ್ಜುನಸ್ವಾಮಿ ದೇವಾಲಯದ ಶ್ರೀ ಗಾಯತ್ರಿ ಸದನದಲ್ಲಿ ನೆರವೇರಿತು.

ಈ ಆಚರಣೆಯ ಮುಖ್ಯಾಂಶಗಳಾದ ಸಂಕಲ್ಪ ಗಣಪತಿ ಪೂಜೆ, ಸ್ವ-ಶುದ್ಧೀಕರಣ, ನವಕಾಂಡ ಋಷಿಗಳಿಗೆ ಪೂಜೆ, ದೇವ-ಪಿತೃ-ಋಷಿಗಳಿಗೆ ತರ್ಪಣ, ವೈದಿಕ ಅಧ್ಯಯನ ಮತ್ತು ಆಧ್ಯಾತ್ಮಿಕ ಆಚರಣೆಗಳಿಗೆ ಬದ್ಧತೆಯ ಪುನಃಸಂಕಲ್ಪಕ್ಕೆ ಸಂಕೇತವಾಗಿ ಹೊಸ ಯಜ್ಞೋಪವೀತ ಧಾರಣೆ ಮತ್ತು ವಿರಜಾ ಹೋಮ ಇವುಗಳು ಅಂದು ಬೆಳಿಗ್ಗೆ 9:00 ಘಂಟೆಗೆ ಪ್ರಾರಂಭವಾಗಿ ಮೂರು ಘಂಟೆಗಳ ಅವಧಿಯಲ್ಲಿ ನೆರವೇರಿದವು. ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಪುರೋಹಿತರಾದ ವೇ॥ಬ್ರ॥ ಶ್ರೀ ಭಾರ್ಗವ ಶರ್ಮ ಅವರು ಉಪಾಕರ್ಮ ವಿಧಿಗಳನ್ನು ವ್ಯವಸ್ಥಿತವಾಗಿ, ಅರ್ಥಪೂರ್ಣವಾಗಿ ನಡೆಸಿಕೊಟ್ಟರು.

ಈ ಆಚರಣೆಯಲ್ಲಿ ಕಾರ್ಯಕಾರಿ ಸಮಿತಿಯ 11 ಸದಸ್ಯರನ್ನು ಒಳಗೊಂಡಂತೆ ಸಂಘದ 50 ಸದಸ್ಯರುಗಳು ಪಾಲ್ಗೊಂಡಿದ್ದರು. **ಸಂಘದ ವತಿಯಿಂದ ಮೊಟ್ಟಮೊದಲ ಬಾರಿಗೆ ನೆರವೇರಿದ ಈ ಕಾರ್ಯಕ್ರಮಕ್ಕೆ ಉದಾರ ಧನಸಹಾಯ ನೀಡಿದ ಎಲ್ಲ ಸದಸ್ಯರಿಗೂ ಕಾರ್ಯಕಾರಿ ಸಮಿತಿಯು ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತದೆ.**

ಅತಿ ಮುಖ್ಯವಾಗಿ, ನಮ್ಮ ಸನಾತನ ಧರ್ಮವು ಪ್ರತಿಪಾದಿಸಿರುವ ವಿಚಾರ ಮತ್ತು ಅವುಗಳ ಪ್ರಸರಣೆಗಾಗಿ ವಿಧಿಸಲ್ಪಟ್ಟಿರುವ ಆಚರಣೆಗಳು ಇಂದಿನ ಕಾಲಘಟ್ಟದಲ್ಲಿ ಬ್ರಾಹ್ಮಣ ಸಮುದಾಯದಲ್ಲಿಯೇ ಲುಪ್ತವಾಗುತ್ತಿರುವುದು ಸರ್ವವಿದಿತ. ಕಳವಳಕಾರಿಯಾದ ಈ ಬೆಳವಣಿಗೆಗೆ ಸಾರ್ವತ್ರಿಕ ಪರಿಹಾರ ಬ್ರಾಹ್ಮಣರ ನಡೆ, ನುಡಿ, ಮನೋವ್ಯಾಪಾರಗಳಲ್ಲಿ ಈ ಆಚಾರ-ವಿಚಾರಗಳ ಪುನರುಜ್ಜೀವನ. ಬೃಹಚ್ಚರಣ ಸಂಘದ ಸಾಮೂಹಿಕ ನಿತ್ಯನೂತನ ಯಜುರ್-ಉಪಾಕರ್ಮದ ಆಚರಣೆ ಈ ಗುರಿಸಾಧನೆಯ ಮಾರ್ಗದಲ್ಲಿ ಒಂದು ಮುಖ್ಯ ಹೆಜ್ಜೆ.



ಎಸ್. ಸಿ. ಶ್ರೀನಿವಾಸ
9845376949

ಛಾಯಾಗ್ರಹಣ : ಎನ್. ಶಿವಕುಮಾರ್

# ಯಜುರ್ ಉಪಾಕರ್ಮ ಆಚರಣೆಯ ಛಾಯಾ ಚಿತ್ರಗಳು







# ಯಜುರ್ ಉಪಾಕರ್ಮ ಆಚರಣೆ



## ಉಪಾಕರ್ಮಕ್ಕೆ ದೇಣಿಗೆ ನೀಡಿರುವ ಸದಸ್ಯರು (ರೂ. ಗಳಲ್ಲಿ)

| | | | | | |
|---|---|---|---|---|---|
| 1. ಅರುಣ್ ಕೆ.ಎಸ್. | 2000/– | 6. ಶಶಿಧರ್ ಎಚ್. ಕೆ. | 2000/– | 11. ವೆಂಕಟೇಶ್ ಆರ್. ಎಸ್. | 2000/– |
| 2. ಸುಬ್ರಹ್ಮಣ್ಯಂ ಬಿ. | 3100/– | 7. ಮಂಜುನಾರಾಯಣ್ ಕೆ. | 2000/– | 12. ಸೂರ್ಯನಾರಾಯಣ ಟಿ.ಪಿ. | 2000/– |
| 3. ಗಣೇಶ್ ಶ್ರೀಧರ್ | 2000/– | 8. ಅರುಣ್ ವಿ. | 2000/– | 13. ನಾಗೇಶ | 2000/– |
| 4. ಶ್ಯಾಮ್ ಸುಂದರ್ ಆರ್. ಎ. | 2000/– | 9. ಶ್ರೀನಿವಾಸ್ ಎಸ್. ಸಿ. | 2000/– | 14. ನಿತಿನ್ | 900/– |
| 5. ಸೋಮಸುಂದರ ಎಸ್. | 2000/– | 10. ಶರ್ಮ ಕೆ. ಬಿ. ಎಸ್. | 2000/– | 15. ಸತ್ಯನಾರಾಯಣ ಎಸ್. | 1000/– |

## ಉದಾರ ಕೊಡುಗೆ



ದಿ॥ ಆಶಾ ಕುಮಾರ್

ಸಂಘದ ಸದಸ್ಯ ಶ್ರೀ ಆರ್. ಎನ್. ಕುಮಾರ್ ಅವರು ಈಚೆಗೆ ನಮ್ಮನ್ನಗಲಿದ ತಮ್ಮ ಪತ್ನಿ ಹಾಗೂ ಸಂಘದ ಸದಸ್ಯೆ ಶ್ರೀಮತಿ ಆಶಾ ಕುಮಾರ್ ಅವರ ನೆನಪಿನಲ್ಲಿ ವಿದ್ಯಾನಿಧಿಗೆಂದು 25,000/– ರೂ. ಗಳನ್ನು ದೇಣಿಗೆಯಾಗಿ ನೀಡಿರುತ್ತಾರೆ.

ಉದಾರ ಮನಸ್ಸಿನ ಈ ಕೊಡುಗೆಗಾಗಿ ಸಂಘವು ಶ್ರೀಯುತರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತಾ ಶ್ರೀಮತಿ ಆಶಾ ಕುಮಾರ್ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ ಮತ್ತು ಅವರ ನೆನಪು ನಮ್ಮೆಲ್ಲರ ಮನದಲ್ಲಿ ಸದಾ ಹಸಿರಾಗಿರಲೆಂದು ಪ್ರಾರ್ಥಿಸುತ್ತದೆ.

ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಆರ್. ಎಸ್. ವೆಂಕಟೇಶ್ ಅವರು ಅನ್ನಸಂತರ್ಪಣೆ ಮತ್ತು ವಿದ್ಯಾನಿಧಿಗೆಂದು ಒಟ್ಟು 20,000/– ರೂ. ಗಳನ್ನು ನೀಡಿರುತ್ತಾರೆ.

ಕಾರ್ಯಕಾರಿ ಸಮಿತಿಯು ಶ್ರೀಯುತರ ಈ ಉದಾರ ಕೊಡುಗೆಯನ್ನು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸುತ್ತಾ ಭಗವಂತನು ಶ್ರೀಯುತರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ಕರುಣಿಸಲೆಂದು ಹಾರೈಸುತ್ತದೆ.

# ಚಿದಂಬರ ರಹಸ್ಯ



**ಶ್ರೀಶಿವಃ ಚಿದಂಬರಾಭಿಧಂ ಕ್ಷೇತ್ರಂ ಶಿವಕ್ಷೇತ್ರಮನುತ್ತಮಂ**
**ತದಪ್ಯೇಕಂ ಮಹತ್ಸ್ಥಾನಂ ಮಮ ಪ್ರಿಯಕರಂ ಶಿವೇ**



ಕುತೂಹಲ ತರುವಂತಹ **''ಚಿದಂಬರ ರಹಸ್ಯ''** ಎನ್ನುವ ಶೀರ್ಷಿಕೆಯನ್ನು ಕಂಡೊಡನೆ ತಮಿಳುನಾಡಿನ ಚಿದಂಬರಂನಲ್ಲಿರುವ ಶ್ರೀ ಚಿದಂಬರೇಶ್ವರ ದೇವಾಲಯ ನೆನಪಿಗೆ ಬರುತ್ತದೆ. ಪಂಚಭೂತಗಳಲ್ಲಿ ಆಕಾಶ ತತ್ತ್ವದ ಪ್ರತೀಕವಾಗಿರುವ ಪರಶಿವನ ಅಂಶವೇ ಆಗಿರುವ ನಟರಾಜನನ್ನೂ ಇಲ್ಲಿ ದರ್ಶಿಸಬಹುದು. ಶೈವ ಸಂಪ್ರದಾಯವನ್ನು ಆಚರಿಸುತ್ತಿದ್ದ ಚೋಳರ ಕಾಲದ ಈ ದೇವಾಲಯದಲ್ಲಿ ವೈಷ್ಣವ ಸಂಪ್ರದಾಯದ ಶ್ರೀ ಗೋವಿಂದರಾಜ ಪೆರುಮಾಳ್ ಅವರು ತಮ್ಮ ಪಾದಗಳ ಬಳಿಯಲ್ಲಿ ನೆಲೆಸಿರುವ ಶ್ರೀಲಕ್ಷ್ಮಿದೇವಿ ಸಮೇತ ದರ್ಶನ ನೀಡುತ್ತಿದ್ದಾರೆ. ಅಭೇದ ಜ್ಞಾನದ ಸಂಕೇತವಾದ ಹರಿ-ಹರರು ನೆಲೆಸಿರುವ ಈ ಕ್ಷೇತ್ರ ಪರಮ ಪವಿತ್ರವಾದುದು.

ಭೌಗೋಳಿಕವಾಗಿ ಚಿದಂಬರಂ ದೇವಾಲಯವು ಭೂಮಿಯ ಕಾಂತೀಯ ಸಮಭಾಜಕ ವೃತ್ತದಲ್ಲಿದೆ. ಈ ಪ್ರದೇಶದಲ್ಲಿ ಕಾಂತಕ್ಷೇತ್ರದ ರೇಖೆಗಳು ಭೂಮಿಯ ಮೇಲ್ಮೈಗೆ ಹತ್ತಿರದಲ್ಲಿವೆ. ದೇವಾಲಯದ ವಾಸ್ತುಶಿಲ್ಪ ಮತ್ತು ವಿನ್ಯಾಸ ಮಾನವ ದೇಹದ ರಚನೆ ಮತ್ತು ಕಾರ್ಯಗಳನ್ನು ಪ್ರತಿಬಿಂಬಿಸುತ್ತದೆ. ನಟರಾಜ ಪ್ರತಿಮೆಯು ದೇವಾಲಯದ ಮಧ್ಯಭಾಗದಲ್ಲಿ ಇಲ್ಲ, ಸ್ವಲ್ಪ ಎಡಭಾಗದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ. ಇದು ಮಾನವ ಹೃದಯವು ದೇಹದ ಎಡಭಾಗದಲ್ಲಿರುವುದಕ್ಕೆ ಸಂಕೇತವಾಗಿದೆ. ಗರ್ಭಗುಡಿಯ ಗೋಪುರವನ್ನು 21,600 ಚಿನ್ನದ ಹಾಳೆಗಳಿಂದ ನಿರ್ಮಿಸಲಾಗಿದೆ. ಇದು ಒಬ್ಬ ವ್ಯಕ್ತಿಯ ಒಂದು ದಿನದ ಉಸಿರಾಟದ ಸಂಖ್ಯೆ. ಈ ಹಾಳೆಗಳನ್ನು 72,000 ಮೊಳೆಗಳಿಂದ ಭದ್ರಪಡಿಸಲಾಗಿದೆ. ಇದು ದೇಹದಲ್ಲಿರುವ ನಾಡಿಗಳ ಸಂಖ್ಯೆ. ದೇವಾಲಯದಲ್ಲಿ ಐದು ಪ್ರವೇಶ ದ್ವಾರಗಳು ಪಂಚೇಂದ್ರಿಯಗಳಿಗೆ, 28 ಕಂಬಗಳು ಶೈವಾಗಮ ಶಾಸ್ತ್ರದ 28 ವಿಧಾನಗಳಿಗೆ ಮತ್ತು ಅಡ್ಡ ತೊಲೆಗಳು ರಕ್ತನಾಳಗಳಿಗೆ ಸಂಕೇತವಾಗಿವೆ.

ಈ ದೇವಾಲಯದಲ್ಲಿ ಪರಮಶಿವನು ಮೂರು ರೀತಿಯಲ್ಲಿ ದರ್ಶನ ನೀಡುತ್ತಿದ್ದಾನೆ. ಒಂದು ಆಕಾಶ ತತ್ತ್ವ ಪ್ರತಿಪಾದಿಸುವ ದೈವ (ಖಾಲಿ ಜಾಗ-ನಿರ್ವಿಕಲ್ಪ, ನಿರಾಕಾರ), ನರ್ತನ ನಟರಾಜ ಮತ್ತು ಲಿಂಗರೂಪ ಶಿವ.

ನಟರಾಜನ ಕೈಯಲ್ಲಿ ಹಿಡಿದಿರುವ ಡಮರುಗ ಸೃಷ್ಟಿಯ ಶಬ್ದವನ್ನು ಮತ್ತು ಬ್ರಹ್ಮಾಂಡದ ಆರಂಭವನ್ನು ಸಂಕೇತಿಸುತ್ತದೆ. ಬಲಗೈಯಲ್ಲಿನ ಅಭಯ ಮುದ್ರೆ ಭಂಗಿಯು ರಕ್ಷಣೆ ಮತ್ತು ಪ್ರಪಂಚದ ನಿರ್ವಹಣೆಯನ್ನು ಸೂಚಿಸುತ್ತದೆ. ನಟರಾಜನ ಮೇಲಿನ ಎಡಗೈಯಲ್ಲಿರುವ ಜ್ವಾಲೆಯು ಅಸ್ತಿತ್ವ ಮತ್ತು ವಿಲಯ ಚಕ್ರೀಯ ಸ್ವರೂಪವನ್ನು ಪ್ರತಿನಿಧಿಸುತ್ತದೆ. ಮೇಲಕ್ಕೆ ಎತ್ತಿರುವ ಕಾಲು ಅನುಗ್ರಹ ಮತ್ತು ಮುಕ್ತಿಯ ಮಾರ್ಗವನ್ನು ಸಂಕೇತಿಸುತ್ತದೆ, ಜೀವಾತ್ಮಗಳನ್ನು ಆಧ್ಯಾತ್ಮಿಕ ಜ್ಞಾನೋದಯದ ಕಡೆಗೆ ಮಾರ್ಗದರ್ಶಿಸುತ್ತದೆ. ನಟರಾಜನ ಪಾದಗಳಡಿಯಲ್ಲಿ ಸಂಹರಿಸಲ್ಪಟ್ಟ ರಾಕ್ಷಸನು ಅಜ್ಞಾನವನ್ನು ಜಯಿಸಿ ಮುಕ್ತಿಯ ಸಾಧನೆಯನ್ನು ಸಂಕೇತಿಸುತ್ತದೆ. ನಟರಾಜನ ಹಿಂದಿರುವ ಪ್ರಭಾವಳಿಯು ಪ್ರಪಂಚದ ಪುನಾರಾವರ್ತನೆಯ ಅಥವಾ ಜೀವ ಮತ್ತು ಜಡ ರಾಶಿಗಳ ಚಕ್ರದ ಸಂಕೇತ. ನಟರಾಜನ ತಾಂಡವ ನೃತ್ಯವು ಬ್ರಹ್ಮಾಂಡದ ಆಧಾರವಾಗಿರುವ ಲಯ ಮತ್ತು ಶಕ್ತಿಯ ದೃಶ್ಯ ಪ್ರಾತಿನಿಧ್ಯವನ್ನು ತೋರುತ್ತದೆ. ಇದನ್ನು ಭೌತಶಾಸ್ತ್ರದಲ್ಲಿ ಥರ್ಮೋಡೈನಮಿಕ್ಸ್‌ನ ಎರಡನೆಯ ನಿಯಮದಂತೆ **ಶಕ್ತಿಯನ್ನು ಸೃಷ್ಟಿಸಲಾಗುವುದಿಲ್ಲ ಅಥವಾ ನಾಶಪಡಿಸಲಾಗುವುದಿಲ್ಲ** ಎಂಬ ಪರಿಕಲ್ಪನೆಗೆ ಹೋಲಿಸಬಹುದು. **ಕೊನೆಯದಾಗಿ ಚಿದಂಬರ ರಹಸ್ಯವೇನೆಂದರೆ ದೈವತ್ವವು ಭೌತಿಕ ರೂಪವನ್ನು ಮೀರಿದ್ದು ಮತ್ತು ಪ್ರಜ್ಞೆಯ ವಿಶಾಲತೆಯ ಅನುಭೂತಿ ಎಂಬ ಗೌಪ್ಯಾರ್ಥ.**



**ನಟರಾಜನ ರೂಪದಲ್ಲಿ ವಿಜೃಂಭಿಸುತ್ತಿರುವ ಆ ಪರಶಿವನಿಗೆ ನಮೋನಮಃ**

**ಆರ್. ರಮೇಶ್**
**9886034048**

# ನಮ್ಮ ಕಾಶ್ಮೀರ ಪ್ರವಾಸ – ಒಂದು ಅವಿಸ್ಮರಣೀಯ ಅನುಭವ



ಡಾ॥ ನಾಗಲಕ್ಷ್ಮಿ
ಹೆಸರಾಂತ ನೃತ್ಯ ಕಲಾವಿದೆ

ಮೈಸೂರು ಹಾಗು ಬೆಂಗಳೂರಿನಲ್ಲಿ ಸಕ್ರಿಯವಾಗಿರುವ `One India, Strong India' ಎಂಬ ಸಮಾಜಮುಖಿ ಸಂಸ್ಥೆಯು ಜಮ್ಮು ಮತ್ತು ಕಾಶ್ಮೀರದ ಮಂದಿರಗಳ ದರ್ಶನ ಪ್ರವಾಸವನ್ನು ಈ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಆಯೋಜಿಸಿದ್ದರು. ಜಮ್ಮುವಿನ ವೈಷ್ಣೋದೇವಿ, ಶ್ರೀನಗರದ ಶಂಕರಾಚಾರ್ಯ ಮಂದಿರ ಹಾಗೂ ನೂತನವಾಗಿ ತೀತ್ವಾಲ್ ನಲ್ಲಿ ಸ್ಥಾಪಿಸಲಾದ ಶಾರದಾದೇವಿ ಮಂದಿರಗಳು ಈ ಪಟ್ಟಿಯಲ್ಲಿ ಇದ್ದು, ಏಪ್ರಿಲ್ 22 ರಿಂದ ಮೇ 5ನೇ ತಾರೀಖಿನವರೆಗೂ ಈ ಪ್ರವಾಸ ನಡೆಯಿತು.

ಈ ಪ್ರವಾಸಕ್ಕೆ ನನ್ನ ಸೋದರಿ ಹಾಗೂ ಸಂಘದ ಸದಸ್ಯೆ ಶ್ರೀಮತಿ ಸುನಂದ, ಭಾವನವರಾದ ಶ್ರೀ ಗೋವಿಂದರಾಜು, ನನ್ನ ಶ್ರೀಮತಿ ಡಾ॥ ನಾಗಲಕ್ಷ್ಮಿ ಹಾಗು ನಾನು ಸೇರಿದಂತೆ ಬೆಂಗಳೂರು ಹಾಗೂ ಮೈಸೂರಿನಿಂದ ಸುಮಾರು 40 ಜನರ ತಂಡ ಹೊರಟಿತು.

ಅತ್ಯಂತ ಉತ್ಸುಕತೆಯಿಂದ ಜಮ್ಮು ತಲುಪಿದ ದಿನವೇ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ಭೀಭತ್ಸ ಕ್ರೌರ್ಯ ಮೆರೆದಿದ್ದು, ವಿಚಲಿತರಾದ ಸುಮಾರು 25 ಜನ ಈ ಕೃತ್ಯ ನಡೆದ ಎರಡು ಮೂರು ದಿನಗಳಲ್ಲಿ ವಾಪಸು ಹೊರಟು ಬಂದರು. ಉಳಿದ ನಾವೆಲ್ಲರೂ ಭಗವಂತನ ಮೇಲೆ ಭರವಸೆ ಇಟ್ಟು ಧೈರ್ಯದಿಂದ ಪ್ರವಾಸವನ್ನು ಮುಂದುವರಿಸಿದೆವು.

ಕೆಲವು ತೊಂದರೆ ತೊಡಕುಗಳು ಕಂಡುಬಂದರೂ ವಿಚಲಿತರಾಗದೆ ದೃಢ ಸಂಕಲ್ಪ ಮಾಡಿ ಜಮ್ಮು, ಕಟ್ರಾ ಹಾಗೂ ಸುತ್ತಮುತ್ತಲಿನ ವೈಷ್ಣೋದೇವಿ ಮತ್ತು ಇತರ ದೇವಸ್ಥಾನಗಳನ್ನು ಮತ್ತು ಪ್ರಮುಖ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿದೆವು.

ತಂಡವು ಏಪ್ರಿಲ್ 28ನೇ ತಾರೀಖು ಶ್ರೀನಗರಕ್ಕೆ ತಲುಪಿತು. ಮಾರ್ಗ ಮಧ್ಯದಲ್ಲಿ ರಾಂಬನ್ ಎಂಬ ಊರಿನ ಬಳಿ ವಿಪರೀತ ಮಳೆಯ ಕಾರಣ ರಸ್ತೆ ಕೊಚ್ಚಿಕೊಂಡು ಹೋಗಿದ್ದರಿಂದ ಪ್ರಯಾಣವು ಸಾಕಷ್ಟು ಸಮಯ ಹಾಗು ಶ್ರಮ ತೆಗೆದುಕೊಂಡಿತು.

ಶ್ರೀನಗರಕ್ಕೆ ಬಂದ ನಂತರ ನಾವೆಲ್ಲ ಪ್ರೇಕ್ಷಣೀಯ ಸ್ಥಳಗಳಾದ ಗುಲ್ಮಾರ್ಗ್ ಹಾಗೂ ಸೋನಾಮಾರ್ಗ್‌ಗಳನ್ನು ನೋಡಿದೆವು. ಗುಲ್ಮಾರ್ಗ್‌ಗೆ ಹೋಗುವಾಗ ಗಂದರ್ಬಲ್ ಎಂಬಲ್ಲಿ ಅತ್ಯಂತ ಮನೋಹರವಾದ ಮಾತಾ ಖೀರ್ ಭವಾನಿ ಮಂದಿರವನ್ನು ಕೂಡ ನೋಡಿಕೊಂಡು ಹೋದೆವು. ಈ ಎಲ್ಲಾ ಸ್ಥಳಗಳಲ್ಲಿ ಭಾರತ ಸರ್ಕಾರವು ಅತ್ಯಂತ ಬಿಗಿ ಬಂದೋಬಸ್ತ್ ಮಾಡಿತ್ತು. ಗುಲ್ಮಾರ್ಗ್‌ನಲ್ಲಿ NDTVಯ ಶಿವ್ ಆರೂರ್ ಜೊತೆ ಸಂವಾದವು ಕೂಡ ಆಗಿ ಅದು ಆ ರಾತ್ರಿಯೇ ಆ ವಾಹಿನಿಯಲ್ಲಿ ಬಿತ್ತರಗೊಂಡಿತು.

ಶ್ರೀನಗರದ ಶಂಕರಾಚಾರ್ಯ ಬೆಟ್ಟದಲ್ಲಿ ಮೇ 2ರಂದು ಆದಿಗುರು ಶಂಕರಾಚಾರ್ಯ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಿದೆವು. ಅಂದಿನ ಕಾರ್ಯಕ್ರಮದಲ್ಲಿ ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಬ್ಯಾಂಡ್ ತಂಡದವರು ಪಾಲ್ಗೊಂಡಿದ್ದರು. ಈ ಬೆಟ್ಟದಲ್ಲಿರುವ ಗುಹೆಯಲ್ಲಿ ಆದಿಗುರು ಶಂಕರಾಚಾರ್ಯರು ಧ್ಯಾನದಲ್ಲಿ ನಿರತರಾಗಿದ್ದರು ಎಂದು ನಂಬಿಕೆ ಇದೆ. ಅಂದು ಬೆಳಗಿನ ಜಾವ ನಾಲ್ಕು ಗಂಟೆಗೆ ಆ ದಿವ್ಯ ಸನ್ನಿಧಿಯಲ್ಲಿ ನಮ್ಮ ಭಾವ ಶ್ರೀ ಗೋವಿಂದರಾಜು ಅವರ ನೇತೃತ್ವದಲ್ಲಿ ತಂಡವು ರುದ್ರಾಭಿಷೇಕವನ್ನು ನೆರವೇರಿಸಿತು. ಭಾರತದಲ್ಲಿ ಶಾಂತಿ ನೆಲೆಸಲು ವೇದಘೋಷ, ಸೈನಿಕರ ಆಯಸ್ಸು ಅಭಿವೃದ್ಧಿಗಾಗಿ ಮೃತ್ಯುಂಜಯ ಜಪ, ಹಾಗೂ ಈಗಿರುವ ಕಾಶ್ಮೀರದ ಸನ್ನಿವೇಶದಲ್ಲಿ ಸ್ಥಿರತೆ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಹಾಗೂ ಮೂಲ ಶಾರದಾ ಪೀಠವನ್ನು ಹಿಂಪಡೆಯುವುದಕ್ಕಾಗಿ ಪ್ರಾರ್ಥಿಸಿದೆವು. ನಂತರ ನನ್ನ ಶ್ರೀಮತಿಯವರಾದ ಮೈಸೂರಿನ ಹೆಸರಾಂತ ನೃತ್ಯ ಕಲಾವಿದೆ ಹಾಗೂ ಗುರು ಡಾ॥ ನಾಗಲಕ್ಷ್ಮಿ ಅವರು ಶ್ರೀ ವಿದ್ಯಾರಣ್ಯ ಮಹರ್ಷಿಗಳು ರಚಿಸಿರುವ ಕಾವ್ಯ "ಶ್ರೀಮದ್ ಶಂಕರ ದಿಗ್ವಿಜಯಃ" ಆಧಾರಿತ "ಶಂಕರ ದಿಗ್ವಿಜಯ ಚಮತ್ಕಾರಃ ಹಾಗೂ ಶ್ರೀ ಶಾರದಾ ಪೀಠಾರೋಹಣಂ" ಭರತನಾಟ್ಯ ನೃತ್ಯ ರೂಪಕವನ್ನು ಪ್ರಸ್ತುತ ಪಡಿಸಿದರು.

`One India, Strong India' ತಂಡವು ಸತತವಾಗಿ 12ನೆಯ ವರ್ಷ ಶಂಕರ ಜಯಂತಿಯ ಆಚರಣೆಗಾಗಿ ಕಾಶ್ಮೀರ ಪ್ರವಾಸವನ್ನು ಆಯೋಜಿಸುತ್ತಿರುವುದೊಂದು ವಿಶೇಷ. ಸ್ವಾಮಿ ವಿಶ್ವಾತ್ಮಾನಂದ ಸರಸ್ವತಿ ಸುಂದರಬನಿ ಹಾಗೂ

ಮಹಾಮಂಡಲೇಶ್ವರ ಶ್ರೀ ಅಕ್ಷಗಣಾನಂದ ಜಿ ಇವರುಗಳು ಸತ್ಸಂಗವನ್ನು ನಡೆಸಿದರು. C.R.P.F., ಭಾರತೀಯ ಸೇನೆ ಹಾಗೂ ಜಿಲ್ಲಾ ಆಡಳಿತ ಸಿಬ್ಬಂದಿಯವರು ಕಾರ್ಯಕ್ರಮಕ್ಕೆ ಸಹಾಯ ಹಸ್ತ ನೀಡಿದ್ದು ಹಲವಾರು ಗಣ್ಯರು ಹೋಮದಲ್ಲಿ ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದ ಸುದ್ದಿ ವಿಶ್ವವಾಣಿ ಪತ್ರಿಕೆ, ಸವಾಲ್ ಟಿವಿ, ಶ್ರೀನಗರದಲ್ಲಿನ ದೂರದರ್ಶನ ವಾಹಿನಿಗಳಲ್ಲಿ ಬಿತ್ತರಗೊಂಡಿತು.

ನಂತರ ಉಳಿದ ಎರಡು ದಿನ ನಾವು ಪುಲ್ವಾಮಾದ ಜ್ವಾಲಾ ಮಾತಾ ಮಂದಿರ ಹಾಗೂ ಅನಂತ್‌ನಾಗ್‌ನಲ್ಲಿರುವ ಕನ್ಯಾಕುಮಾರಿಯ ವಿವೇಕಾನಂದ ಕೇಂದ್ರದ ನಾಗದಂಡಿ ಆಶ್ರಮವನ್ನು ಸಂದರ್ಶಿಸಿದೆವು. ಹಲವಾರು ಕಡೆ ದೇವಸ್ಥಾನಗಳಲ್ಲಿ ನಾವು ಭೇಟಿಯಾದ ಕಾಶ್ಮೀರಿ ಪಂಡಿತರು ನಮ್ಮೊಡನೆ ಮಾತನಾಡುತ್ತಾ, ಹಿಂದೆ ತಮಗೆ ಆಗಿರುವ ಶೋಷಣೆ, ಅನ್ಯಾಯಗಳ ಅನುಭವಗಳನ್ನು ಹಾಗು ಅನಿಸಿಕೆಗಳನ್ನು ಹಂಚಿಕೊಂಡರು.

ನಂತರ, ಶಾರದಾ ಮಾತೆಯ ನೂತನ ಮಂದಿರವಿರುವ ತೀತ್ವಾಲ್‌ಗೆ ಹೋಗುವ ಉದ್ದೇಶವಿದ್ದರೂ ಅದು ಪಾಕಿಸ್ತಾನದ ಗಡಿಯಲ್ಲೇ ಇರುವುದರಿಂದ ಆ ಸಂದರ್ಭದಲ್ಲಿ ಹೋಗಲಾಗಲಿಲ್ಲ.

ಈ ಪ್ರವಾಸ ಮುಗಿಸಿ ಮೇ 5ನೇ ತಾರೀಖು ನಾವು ಶ್ರೀನಗರದಿಂದ ಹೊರಟು ಬೆಂಗಳೂರು ಹಾಗೂ ಮೈಸೂರು ಸೇರಿದೆವು. ಇದಾದ ಎರಡು ದಿನದಲ್ಲೇ ಭಾರತದ ಆಪರೇಷನ್ ಸಿಂಧೂರ್ ಪ್ರಾರಂಭವಾಯಿತು.

ಹೀಗೆ, ಆದಿಶಂಕರ ಭಗವತ್ಪಾದರ ಜಯಂತಿಯನ್ನು ಈ ಬಾರಿ ಕಾಶ್ಮೀರದಲ್ಲಿ ಆಚರಿಸುವ ಸೌಭಾಗ್ಯ ನಮ್ಮದಾಯಿತು.



**ಎಸ್. ನಾಗರಾಜನ್**
ಮೈಸೂರು
9845220195

## ದಸರಾ ಬೊಂಬೆ

ದಸರಾ ಬೊಂಬೆಯ ಇಟ್ಟಿದ್ದೀವಿ ನಮ್ಮಯ ಮನೆಯಲ್ಲಿ
ಅದನ್ನು ನೋಡಲು ಬರಲೇಬೇಕು ಎಲ್ಲರೂ ಜೊತೆಯಲ್ಲಿ ।
ಬರುವ ಜನರಿಗೆ ಖಂಡಿತ ದೊರೆವುದು ಪ್ರೀತಿಯ ಸ್ವಾಗತವು
ತಪ್ಪದೆ ಕೊಡುವೆವು ಬಂದ ಎಲ್ಲರಿಗೆ ಪಾನಕ ಚರುಪುಗಳು ॥

ಟೀವಿಯಿಂದಲಿ ಮಧ್ಯದಲಿರುವುದೇ ಪಟ್ಟದ ಗೊಂಬೆಗಳು
ಬಣ್ಣಬಣ್ಣದ ಉಡುಪು ಧರಿಸಿರುವ ಹೆಣ್ಣು ಗಂಡುಗಳು ।
ಕೆಳಗಿನ ಸಾಲಲಿ ಇರುವುದು ನೋಡಿ ಸುಂದರ ಉದ್ಯಾನ
ಭೇದವ ತೋರದೆ ಎಲ್ಲ ಜನರಿಗೂ ನೀಡಿದೆ ಆಹ್ವಾನ ॥

ಪಕ್ಕದ ಸಾಲಲಿ ಇರುವುದು ನೋಡಿ ದೇವರ ಮೂರ್ತಿಗಳು
ಇಲ್ಲೇ ಇರುವುದು ದೇಶದ ಎಲ್ಲಾ ಪುಣ್ಯ ಕ್ಷೇತ್ರಗಳು ।
ಕಾಶಿ ತಿರುಪತಿ ಕಂಚಿ ಮಧುರೆ ಎಲ್ಲಾ ಇಲ್ಲಿಹುದು
ಇರುವ ಸ್ಥಳದಲೇ ಪುಣ್ಯವ ಗಳಿಸುವ ಮಾರ್ಗವು ದೊರೆತಿಹುದು ॥

ಬಲಗಡೆ ಭಾಗದ ಮೇಲ್ಗಡೆ ನೋಡಿ ವಿಧವಿಧ ಹಣ್ಣುಗಳ ।
ನಿಜ ಹಣ್ಣೆಂದು ಮೋಸ ಹೋಗದಿರಿ ನೋಡುತ ಬಣ್ಣಗಳ ॥
ಕೆಳಗಡೆ ಸಾಲಲಿ ಬಸ್ಸು, ಕಾರು, ಸೈಕಲ್, ಸಾರೋಟು ।
ಜೊತೆಯಲ್ಲೇ ಇದೆ ರೈಲು, ಹಡಗು, ವಿಮಾನ, ರಾಕೇಟು ।

ಎಡಭಾಗದಲಿ ಇರುವುದು ನೋಡಿ ಎಲ್ಲಾ ಪ್ರಾಣಿಗಳು
ಆನೆ, ಸಿಂಹ, ಒಂಟೆ, ಜಿರಾಫೆ, ಹುಲಿ, ಕಪಿ, ಕರಡಿಗಳು ।
ಗರುಡ, ನವಿಲು, ಹದ್ದು, ಗುಬ್ಬಿಯ ಪಕ್ಕದಲಿ ನೋಡಿ
ಕೊಳದ ನೀರಿನಲಿ ತೇಲುತಲಿರುವುದು ಹಂಸಗಳಾ ಜೋಡಿ ॥

ನಮ್ಮಯ ಹಾಗೆ ನೀವೂ ಕೂಡ ಬೊಂಬೆಯ ಕೂಡಿಸಿರಿ
ದಸರಾ ಹಬ್ಬದ ಭಾಗವಿದೆಂಬುದ ಎಂದೂ ಮರೆಯದಿರಿ ।
ಎಲ್ಲ ಹಬ್ಬಗಳ ಪದ್ಧತಿಯನ್ನು ತಪ್ಪದೆ ಉಳಿಸೋಣ
ನಮ್ಮಯ ದೇಶದ ಸಂಸ್ಕೃತಿಯನ್ನು ಎಲ್ಲೆಡೆ ಹರಡೋಣ ॥

**ಬಿ.ಇ. ಗೋವಿಂದ್**
9167762988



# ಓದುಗರ ಅನಿಸಿಕೆಗಳು

ಮಾನ್ಯರೇ,

ಕಳೆದ ತಿಂಗಳು ಬಿಡುಗಡೆಯಾದ, ಡಾ॥ ವಿ. ಛಾಯಾಪತಿ (ಸಂಘದ ಹಿರಿಯ ಸದಸ್ಯರು) ಅವರ ಕೃತಿ ``Daily Sandhyavandanam" ಬಗ್ಗೆ;

ಈ ಕೃತಿಯ ಬಗ್ಗೆ ಶ್ರೀಯುತರಿಗೆ ಮೆಚ್ಚುಗೆ ಸಲ್ಲಿಸುತ್ತಾ ಪ್ರಾಚೀನಕಾಲದಿಂದ ಆಚರಣೆಯಲ್ಲಿರುವ "ಪ್ರವರ"ದ (ವ್ಯಕ್ತಿ ವಿಶೇಷ ಪರಿಚಯಕ್ರಮದ) ವಿವರಣೆಯನ್ನು ಈ ಕೃತಿಯಲ್ಲಿ ಕಾಣಿಸಬೇಕೆಂಬ ನಮ್ರಸೂಚನೆಯನ್ನು ಮಂಡಿಸಿದ್ದೇನೆ. ಶ್ರೀಯುತರು ಈ ಸೂಚನೆಯನ್ನು ಕೃತಿಯ ಮುಂದಿನ ಆವೃತ್ತಿಯಲ್ಲಿ ಅಳವಡಿಸುವುದಾಗಿ ತಿಳಿಸಿರುವರು.

ಅಲ್ಲದೇ, ಅಂದಿನ ದಿನ ಈ ಕೃತಿಯ ಮಾರಾಟದಿಂದ ಒಟ್ಟುಗೂಡಿದ ಮೊತ್ತವಾದ ರೂ. 770/– ಅನ್ನು ಸಂಘದ ಆಡಳಿತವು (ರಸೀದಿ ದಾಖಲೆಯಮೂಲಕ) ಲೆಕ್ಕಕ್ಕೆ ತೆಗೆದುಕೊಂಡಿದೆ ಎಂದೂ ತಿಳಿಸಿದ್ದಾರೆ. ಸಂಘದ ಕಾರ್ಯವೈಖರಿ ಆರೋಗ್ಯಪೂರ್ಣವಾಗಿದೆ ಎಂಬುದಕ್ಕೆ ಇದೊಂದು ಉದಾಹರಣೆ.

ಇದಲ್ಲದೇ ನಾನು ಪಾವತಿಸಬೇಕಾದ ವಾರ್ಷಿಕ ನಿರ್ವಹಣಾ ವೆಚ್ಚದ ವಿವರಗಳಿಗಾಗಿ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ರಮೇಶ್ ಅವರನ್ನು ಸಂಪರ್ಕಿಸಿದಾಗ ಶ್ರೀಯುತರು ನಾನು ಪಾವತಿಸಿರುವ ಪೂರ್ಣ ವಿವರಗಳನ್ನು ಒದಗಿಸಿರುತ್ತಾರೆ. ದಾಖಲೆಗಳನ್ನು ವ್ಯವಸ್ಥಿತವಾಗಿ ಇಟ್ಟುಕೊಂಡು ಬರುತ್ತಿರುವುದಕ್ಕಾಗಿ ಕಾರ್ಯಕಾರಿ ಸಮಿತಿಗೆ ನನ್ನ ಅಭಿನಂದನೆಗಳನ್ನು ಮತ್ತು ಶುಭಕಾಮನೆಗಳನ್ನುಈ ಮೂಲಕ ತಿಳಿಸುತ್ತಿದ್ದೇನೆ.

ಎಲ್ಲರ ಒಳಿತಿಗಾಗಿ ಪ್ರಾರ್ಥಿಸುತ್ತೇನೆ.



**ಎಸ್. ಚಂಪಕಧಾಮ**
**9019021347**

ಮಾನ್ಯ ಸಂಪಾದಕರೇ,

**ಸಂಘತಿ ಆತ್ಮೀಯು ಬಂಧುಮಿತ್ರಾಳ್ಕು ಎಂದೆ ನಮಸ್ಕಾರಂಗು. ವಿಶ್ವಾವಸು ಸಂವತ್ಸರುತ್ಲೆ ಎಲ್ಲಾರ್ಕೂ ನಲ್ಲಾಗ್ಡು**

ತಾವು ಶ್ರಮವಹಿಸಿ ವಿಶೇಷ ಅಂಚೆಯ ಮೂಲಕ ಕಳುಹಿಸಿದ **"ಬೃಹಚ್ಚರಣ"** ದ ಹಿಂದಿನ ಸಂಚಿಕೆಗಳು ತಲುಪಿವೆ. ಏಪ್ರಿಲ್ – ಆಗಸ್ಟ್ 2024 ಸಂಚಿಕೆಯ ಬಗ್ಗೆ ಎರಡು ಮಾತು ಬರೆಯಬೇಕೆನಿಸಿತು.

ದೈವಕೃಪೆಯಿಂದಾಗಿ ಈಗ 84ರ ಅಂಚಿನಲ್ಲಿ ಜೀವಿಸುತ್ತಿದ್ದೇನೆ. ವಯೋಧರ್ಮದಿಂದಾಗಿ ಈ ನಡುವೆ ಬರೆಯಲಾಗಲಿಲ್ಲ.

"ನೀತಿ – ನಿರ್ಣಯ" ಮತ್ತು ವಾಸು ಅವರ "ಆರು ಬಾಂಧವರು" ಲೇಖನಗಳು ಚೆನ್ನಾಗಿವೆ. ಆನೇಕಲ್ ನ ಶ್ರೀ ನಾಗರಾಜ್ ಅವರ ಬಗ್ಗೆ ಶ್ರೀ ರಮೇಶ್ ಅವರ ಲೇಖನ – ಎಂದಿನಂತೆ – ಚೆನ್ನಾಗಿದೆ. ಶ್ರೀ ನಾಗರಾಜ್ ಅವರ ಸಂಪರ್ಕ ಮಾಹಿತಿಯನ್ನು ದಯಮಾಡಿ ಕೊಡಿ. ದಂಪತಿಗಳು "ಎಂಗಳ್ದೆ ವಾತೆ" ಯನ್ನು ಮರೆಯದೇ ಇರುವುದು ಸಂತಸಕರ.

ಪುಟ 11ರಲ್ಲಿನ ದಿವಂಗತ ಶ್ರೀ ವೆಂಕಟೇಶ್ ಅವರ ಭಾವಚಿತ್ರ ಸಂಗ್ರಹಯೋಗ್ಯ. ನನ್ನ ಬಂಧು ಶ್ರೀ ಕೆ.ಸಿ. ನಟರಾಜನ್ ಅವರಿಗೆ ವಂದನೆಗಳು.

ಶ್ರೀಮತಿ ರಾಜಲಕ್ಷ್ಮಿ ಅವರ ಲೇಖನ "ಶ್ರಾವಣ – ಭಾದ್ರಪದ" ಚೆನ್ನಾಗಿದೆ. ಈ ಲೇಖದಿಂದಾಗಿ ಅವರು ಸ್ಮರಿಸಿಕೊಂಡಿರುವ ಬಂಧುಗಳಾದ ವೇಣು, ಮುರಳಿ ಮತ್ತು ನನ್ನ ಚಿಕ್ಕಮ್ಮ ಅಕ್ಕಯ್ಯಮ್ಮ ಅವರುಗಳೆಲ್ಲರ ನೆನಪುಗಳು ನನ್ನಲ್ಲಿ ಮನೆಮಾಡಿವೆ.

ಶ್ರೀಮತಿ ಸಂಧ್ಯಾ ಅವರ ಲೇಖನದಲ್ಲಿ ದಾಖಲಾಗಿರುವ ನೆನಪುಗಳು ನಾವೆಲ್ಲ ಅನುಭವಿಸಿದುವುಗಳೇ!

ಇದೇ ಪುಟದಲ್ಲಿ ಅಚ್ಚಾಗಿರುವ ಸದಸ್ಯರ ನೂತನ ಗೃಹಪ್ರವೇಶ ಸಮಾರಂಭಗಳಿಗಾಗಿ ಅವರೆಲ್ಲರಿಗೂ ನನ್ನ ಶುಭ ಹಾರೈಕೆಗಳು.

ವಂದನೆಗಳು



**ಎಸ್. ಎನ್. ಕೃಷ್ಣಮೂರ್ತಿ**
ಅರಶಿನಕುಂಟೆ, ನೆಲಮಂಗಲ
ಮೂಲ ಸ್ಥಳ: ಸೇವಕನಪಲ್ಲಿ,
ಹೊಸೂರು, ತಮಿಳುನಾಡು

## ವಾರ್ಷಿಕ ನಿರ್ವಹಣಾ ವೆಚ್ಚ (ವರ್ಷಕ್ಕೆ ರೂ. 500/–) ನೀಡಿದ ಸದಸ್ಯರು

ಧೃವನಾರಾಯಣ ಜಿ.ಎ. (1000/–)
ಹರಿಹರ ಜಿ.ಎ. (1000/–)
ಚಂಪಕಧಾಮ ಎಸ್.
ಶ್ರೀನಿವಾಸ್ ಹೆಚ್.ಪಿ.
ಪರಮೇಶ್ವರ್ ಹೆಚ್.ಎಸ್.
ಸುಬ್ಬರಾವ್ ವಿ.
ಅರುಣ್ ವೆಂಕಟಸುಬ್ಬರಾವ್
ಕೃಷ್ಣಸ್ವಾಮಿ ಛಾಯಾಪತಿ
ಶೇಷಾದ್ರಿ ಬಾಬ್
ರಂಗನಾಥ ಪ್ರಸಾದ್ ಬಿ.ಎಸ್.
ರಾಮೇಶ್ವರ ಪ್ರಸಾದ್ ಬಿ.ಎಸ್.
ಅಟ್ಟೂರು ರಾಮಕೃಷ್ಣ ಶರ್ಮ
ಗಾಯತ್ರಿ ಡಿ.ಎಸ್. (1000/–)
ನಾಗರತ್ನ ಎ.
ಅಭಯ್ ಗಣೇಶ್
ಗಣೇಶ್ ಶ್ರೀಧರ್ ಆರ್.
ರೂಪಶ್ರೀ ಎಂ.
ಶಾಂತರಾಮ್ ವಿ.
ರಮೇಶ್ ಆರ್.ಎಸ್.
ರೇಖಾ ರಮೇಶ್
ಕೃಪಾ ಹರೀಶ್
ವೇಣುಗೋಪಾಲ್ ಹೆಚ್.ಪಿ.
ನಾಗರಾಜನ್ ಎಸ್.
ಮಣಿ ವಿ.ಎಸ್.
ಮಾತಂಗ್ ಶೇಷಗಿರಿ
ಯಶೋಧರ ಉಡುಪ
ಸೋಮಸುಂದರ ಎಸ್.
ಜಯಶ್ರೀ ಎಸ್.
ಚಂದ್ರಶೇಖರ್ ಎಸ್.
ರಘುನಂದನ್ ಎಸ್.
ಡಾ॥ ರಮಾದೇವಿ ಎಸ್.
ವಿಜಯಕುಮಾರ್ ಎಸ್.ಆರ್.
ಸತ್ಯನಾರಾಯಣ ಎಸ್.

ಮನೋಜ್ ಎಸ್.
ಮಾನಸ ಎಸ್.
ನಳಿನಿ ಎಸ್.
ಸುಬ್ರಹ್ಮಣ್ಯಂ ಬಿ.
ರಮೇಶ್ ಆರ್.
ಲಲಿತಾ ಹೆಚ್.ಆರ್.
ರಾಜಲಕ್ಷ್ಮಿ ಆರ್.
ಅರುಣ್ ಕೆ.ಎಸ್.
ನಾಗೇಶ
ಭಾಸ್ಕರ್ ಡಿ.ಎಸ್.
ನಾಗವೇಣಿ ಭಾಸ್ಕರ್
ನಿತಿನ್ ಭಾಸ್ಕರ್
ನಕುಲ್ ಭಾಸ್ಕರ್
ಪೂರ್ಣಿಮಾ ಎಸ್.
ವೆಂಕಟೇಶ್ ಆರ್.ಎಸ್.
ರಾಧಾ ವೆಂಕಟೇಶ್
ದೀಪ್ತಿ ಅಜಯ್
ಅಶ್ವಿನಿ ವೆಂಕಟೇಶ್
ಮುರಳಿ ಕೆ.ಬಿ.
ರಾಮಕೃಷ್ಣನ್ ಸಿ.
ಸ್ವಾತಿ ಶೇಖರ್ ಆನಂದ್
ದೀಪ್ತಿ ಸಿ. ಶೇಖರ್
ಮಧುಸೂದನ್ ಕೆ.ಎಸ್.
ನಾಗರತ್ನ ಎನ್.
ವೆಂಕಟಸುಬ್ಬರಾವ್ ಆರ್.ಎನ್.
ವೆಂಕಟಸುಬ್ಬಯ್ಯ ಕೆ.
ಅರುಣ್ ಹೆಚ್.ಜಿ.
ಗಣೇಶ್ ಹೆಚ್.ಡಿ,
ಆಶಾ ಹೆಚ್.ಜಿ.
ಶ್ರೀನಿವಾಸ್ ಕೆ.ಜಿ.
ಬಾಲಸುಬ್ರಮಣಿ ಎಸ್.
ರಾಘವ ಬಿ.
ರವಿ ಪ್ರಕಾಶ್ ಎಸ್.

ನಾಗರತ್ನಮ್ಮ ಡಿ.ಸಿ.
ಸುನಂದಾ ಗೋವಿಂದರಾಜು
ರಮಾದೇವಿ ಕೆ.ಆರ್.
ಸುಮಾ ಪಿ. ಸರಾಫ್
ಪ್ರಸಾದ್ ಜಿ.ಎನ್.
ಮಂಜುನಾಥ್ ಡಿ. (1000/–)
ಸವಿತಾ ಪ್ರಸಾದ್ ಆರ್.ಎ.
ಶ್ರೀನಿವಾಸನ್ ಎ.ವಿ.
ರವಿಶಂಕರ್ ಆರ್.ಪಿ.
ಶರ್ಮ ಕೆ.ಬಿ.ಎಸ್.
ಭರತ್ ಶರ್ಮ
ರಾಜೇಶ್ವರಿ ಆರ್.
ವಸುಂಧರ ಎಸ್.
ಸೇತುರಾಮ್ ಕೆ.ಜಿ.
ಅಜಯ್ ಆರ್.ಬಿ.
ಸಂಜಯ್ ರಾಜಾಪುರ್
ಉದಯ್ ಬಿ. ರಾಜಾಪುರ್
ಭಗವಾನ್ ಆರ್.
ಶ್ರೇಯಸ್ ಆರ್.ಎಸ್.
ಸೂರ್ಯ ಕುಮಾರಿ ಹೆಚ್.ಪಿ.
ಶರತ್ ಜಿ.
ಅನಂತಸ್ವಾಮಿ ಎಸ್. (1000/–)
ಉಮೇಶ್ ಎಸ್.
ಅನುರಾಧ ಎಸ್.ಎನ್.
ವಾಸು ಎಸ್.
ಶ್ರೀಧರ್ ಉಮೇಶ್ ಆತ್ರೇಶ್
ಶ್ರವಣ್ ಎನ್.
ಭಾನುಮತಿ
ಚೇತನ್ ಹೆಚ್.ಕೆ.
ಸದಾನಂದ್ ಹೆಚ್.ಕೆ.
ಸುಮಂತ್ ಎಸ್.
ರಮೇಶ್ ಬಾಬು ಬಿ.ಸಿ.
ಅನಿಲ್ ಕುಮಾರ್ ಬಿ.ಅರ್.
ಸುಂದರಮೂರ್ತಿ ಎ.ಎಲ್.

## ವಾರ್ಷಿಕ ನಿರ್ವಹಣಾ ವೆಚ್ಚ (ವರ್ಷಕ್ಕೆ ರೂ. 500/–) ನೀಡಿದ ಸದಸ್ಯರು

| | | |
|---|---|---|
| ಮೋಹನ್ ಎಸ್. | ಕೀರ್ತಿ ಕಶ್ಯಪ್ (1000/–) | ಪರಿಮಳ ಎಸ್.ಸಿ. |
| ರಘುನಂದನ್ ಜೆ.ವಿ. | ವೆಂಕಟೇಶ್ ಸಿ. | ಶಂಕರ್ ಪ್ರಸಾದ್ ಬಿ.ಆರ್. |
| ವೈದ್ಯನಾಥ್ ಎ.ಎಸ್. | ಶೈಲಾ ಭಾನುಪ್ರಕಾಶ್ | ಅಕ್ಷಯ್ ಆತ್ರೇಯ ಬಿ.ಎಸ್. |
| ರಾಕೇಶ್ ರವಿಶಂಕರ್ | ಚಂದ್ರಶೇಖರ್ ಕೆ. | ಜಗದೀಶ್ ಸುಬ್ಬರಾಮಯ್ಯ (1001/–) |
| ಶ್ರೀನಿವಾಸನ್ ಕೆ.ಎಸ್. | ಅರುಣ್ ವಿ. | ಸರಸ್ವತಿ ಬಿ.ಪಿ. (1000/–) |
| ಸುನಿಲ್ ವಿ. | ಅನ್ನಪೂರ್ಣ ವಿ. | ಸಂಧ್ಯಾ ಬಿ.ಇ. (1000/–) |
| ವೆಂಕಟೇಶ್ ಎ.ಪಿ. | ಅಶೋಕ್ ವಿ. | ಮಂಜುನಾರಾಯಣ್ ಕೆ. |
| ಶ್ರೀನಿವಾಸಮೂರ್ತಿ ಸಿ.ಎಸ್. | ಸುಮಾ ಅರುಣ್ | ವನಿತಾ ಮಂಜುನಾರಾಯಣ್ |
| ಸತ್ಯಮೂರ್ತಿ ಡಿ. | ಸೂರಜ್ ಅರುಣ್ | ಜಯರಾಮನ್ ಬಿ.ವಿ. |
| ವಿಶ್ವೇಶ್ವರನ್ ಡಿ. | ರವಿ ಶಂಕರ್ ಎಸ್. | ತ್ಯಾಗರಾಜನ್ ಎಸ್. |
| ಶ್ರೀಧರ್ ಬಿ. | ಧಾತ್ರಿ ಆರ್. ಪ್ರಸಾದ್ | ಅನುರಾಧಾ ತ್ಯಾಗರಾಜನ್ |
| ರಘುನಾಥ್ ಇ. | ವೀಣಾ ಪ್ರಸಾದ್ ಎಸ್.ಸಿ. | ಸುಬ್ರಹ್ಮಣ್ಯಂ ವಿ. |
| ಪ್ರದೀಪ್ ಎಸ್. | ರಾಹುಲ್ ಶ್ರೀನಿವಾಸ | ವಿನಾಯಕ ವಿ. |
| ಸರಸ್ವತಿ ಕೆ. | ಮಂಜುಳಾ ಟಿ.ಆರ್. | ಚಂದ್ರಶೇಖರ್ ಎಸ್. |
| ಸುಷ್ಮಾ ಚಂದ್ರಶೇಖರ್ | ರಾಧಾ ನಾಗಭೂಷಣ ಶಾಸ್ತ್ರಿ | ಶ್ರೀನಿವಾಸ್ ಆರ್.ಎ. |
| ಅರುಣ್ ಕುಮಾರ್ ಆರ್.ಪಿ. | ಶಶಿಧರ್ ಹೆಚ್.ಕೆ. | ಚಂಪಾ ಎ. |
| ಪದ್ಮನಾಭನ್ ಆರ್.ಎಸ್. | ಗೋಪಾಲಕೃಷ್ಣ ಆರ್. | ರಾಜಲಕ್ಷ್ಮಿ ಎಸ್. (1500/–) |

## ಅನ್ನ ಸಂತರ್ಪಣೆ ನಿಧಿಗೆ ದೇಣಿಗೆ ನೀಡಿದ ಸದಸ್ಯರು/ಹಿತೈಷಿಗಳು (ರೂ. ಗಳಲ್ಲಿ)

| | |
|---|---|
| ರವಿಕುಮಾರ್ ಎಸ್. | 5000/– |
| ರಮೇಶ್ ಆರ್.ಎಸ್. | 5000/– |
| ವಿಜಯಕುಮಾರ್ ಎಸ್.ಆರ್. | 1000/– |
| ಸುಬ್ಬರಾವ್ ವಿ. | 2000/– |
| ನವ್ಯ ಹರ್ಷ | 501/– |
| ಕಾವ್ಯಾ ಮಲ್ಲೂರ್ | 500/– |
| ರವಿ ಪ್ರಕಾಶ್ ಎಸ್. | 2000/– |
| ನಾಗರತ್ನಮ್ಮ ಡಿ.ಸಿ. | 1000/– |
| ಡಾ॥ ಸುಮಾ ಪಿ. ಸರಾಫ್ | 2500/– |
| ಡಾ॥ ಪ್ರಹ್ಲಾದ್ ಎ. ಸರಾಫ್ | 2500/– |
| ಪ್ರಸಾದ್ ಜಿ.ಎನ್. | 1000/– |
| ಗಿರಿಶ್ ಆರ್. | 500/– |
| ವೆಂಕಟೇಶ್ ಕೆ. | 500/– |
| ಗೋವಿಂದ ಪ್ರಸಾದ್ ಬಿ.ಎನ್. | 2000/– |
| ಕುಮಾರ್ ಬಿ.ಎನ್.ಜಿ. | 2000/– |
| ರವಿಶಂಕರ್ ಆರ್.ಪಿ. | 1000/– |
| ರಾಜೇಶ್ವರಿ ಆರ್. | 250/– |
| ಶಶಿಕಲಾ ಎನ್. | 500/– |
| ಸೇತುರಾಮ್ ಕೆ.ಜಿ. | 1500/– |
| ಗೋಪಾಲ್ ವೈ.ಎನ್. | 500/– |
| ಪದ್ಮಜಾ ಶ್ರೀನಿವಾಸನ್ | 1000/– |
| ಗಾಯತ್ರಿ ದೇವಿ | 1000/– |
| ಭಾನುಮತಿ | 500/– |
| ಸುಂದರ್ ಎನ್.ವಿ. | 200/– |
| ಶ್ರೀಕಂಠ ಅಯ್ಯರ್ | 200/– |
| ರಾಧಾಕೃಷ್ಣ ಎಸ್.ಆರ್. | 1000/– |
| ಸತ್ಯಮೂರ್ತಿ ಡಿ. | 2000/– |
| ಸುಷ್ಮಾ ಚಂದ್ರಶೇಖರ್ | 1000/– |
| ಪಾರ್ವತಿ ಆರ್. | 500/– |
| ಅರುಣ್ ಜಿ. | 100/– |
| ರಮಾದೇವಿ ಟಿ.ಎಸ್. | 100/– |
| ಶ್ರೀಧರ ಮೂರ್ತಿ ಬಿ.ಪಿ. | 1000/– |
| ಸುಬ್ರಹ್ಮಣ್ಯಂ ವಿ. | 1000/– |

## ನಾಗಾರಾಧನೆಗೆ ದೇಣಿಗೆ ನೀಡಿದ ಸದಸ್ಯರು (ರೂ. ಗಳಲ್ಲಿ)

| | | | |
|---|---|---|---|
| ಗಾಯತ್ರಿ ಶೇಷಾಚಲ | 500/– | ಸುಬ್ಬರಾವ್ ವಿ. | 3000/– |

## ವಿದ್ಯಾ ನಿಧಿಗೆ ದೇಣಿಗೆ ನೀಡಿದ ಸದಸ್ಯರು/ಸಮುದಾಯದವರು (ರೂ. ಗಳಲ್ಲಿ)

| | | | |
|---|---|---|---|
| ರವಿಕುಮಾರ್ ಎಸ್. | 5000/– | ಶೇಖರ್ ಕೆ.ಸಿ. | 4500/– |
| ಸಂಪತ್ ಕುಮಾರ್ ಸಿ. | 1000/– | ಶ್ರೀನಿವಾಸ್ ಕೆ.ಜಿ. | 3500/– |
| ಸೋಮಸುಂದರ ಎಸ್. | 2500/– | ನಾಗರತ್ನಮ್ಮ ಡಿ.ಸಿ. | 1000/– |
| ಸ್ವಾಮಿನಾಥನ್ ಆರ್.ಎನ್. | 2000/– | ಶೈಲೇಶ್ ಎಸ್. | 2000/– |
| ಶೇಷಾದ್ರಿ ಬಾಬ್ | 500/– | ವೈಜಯಂತಿ ಕೆ.ಎಸ್. | 2000/– |
| ಕೃಷ್ಣಸ್ವಾಮಿ ಛಾಯಾಪತಿ | 500/– | ನರಸು ರಾಮಚಂದ್ರ | 1000/– |
| ಗಣೇಶ್ ಶ್ರೀಧರ್ ಆರ್. (ದಿ॥ ರಮಾಮಣಿ ಮತ್ತು ದಿ॥ ರಂಗನಾಥನ್ ಅವರ ಸ್ಮರಣಾರ್ಥ) | 2500/– | ಉಮಾ ಎನ್. ಗೋವಿಂದ್ | 500/– |
| | | ಸರೋಜ ಕೆ.ಎಲ್. | 500/– |
| ಗಣೇಶ್ ಶ್ರೀಧರ್ ಆರ್. (ದಿ॥ ಹೊಸಕೋಟೆ ಶ್ರೀನಿವಾಸ್ ಜನ್ಮದಿನ ಸ್ಮರಣೆಗಾಗಿ) | 2500/– | ಸರಸ್ವತಿ ಬಿ.ಪಿ. | 2000/– |
| | | ಚಂಪಾ ಎ. | 500/– |

## ಪ್ರತಿಭಾ ಪುರಸ್ಕಾರಕ್ಕೆ ದೇಣಿಗೆ ನೀಡಿದ ಸದಸ್ಯರು/ಸಮುದಾಯದವರು (ರೂ. ಗಳಲ್ಲಿ)

| | | | |
|---|---|---|---|
| ಸತ್ಯಪ್ರಸಾದ್ ಎಸ್.ಆರ್. | 2500/– | ರಾಜಲಕ್ಷ್ಮಿ ಆರ್. | 2500/– |
| ದಕ್ಷಿಣಾಮೂರ್ತಿ ಆರ್.ಎ. | 5001/– | ಡಾ॥ ಶಶಿಕುಮಾರ್ ಎಮ್.ಎಎಸ್. | 2500/– |
| ಲಲಿತಾ ಜೆ.ಆರ್. | 2500/– | ಶೈಲೇಶ್ ಎಸ್. | 500/– |
| ಶ್ಯಾಮಸುಂದರ್ ಆರ್.ಎ. | 2500/– | | |

## ಸಾಂತ್ವನ ನಿಧಿಗೆ ದೇಣಿಗೆ ನೀಡಿದ ಸದಸ್ಯರು ಮತ್ತು ಸಮುದಾಯದವರು (ರೂ. ಗಳಲ್ಲಿ)

| | | | |
|---|---|---|---|
| ಶೈಲಾ ಭಾನುಪ್ರಕಾಶ್ | 5000/– | ಕುಮಾರ್ ಆರ್. ಎನ್. | 1000/– |

## ಹೊಸ ಸದಸ್ಯರು



| | | |
|---|---|---|
| ರಘುರಾಮ್ ಟಿ.ಜೆ. | ಬಿಂದು ಮಾಲಿನಿ | ನಾಗೇಶ್ ಎಸ್. |
| ರಾಮು ಪ್ರಭಾಕರ್ | ಶೃತಿ ಟಿ.ಆರ್. | ವೆಂಕಟೇಶ್ ಟಿ.ಎಸ್. |



**ಕಾರ್ಯಕಾರಿ ಸಮಿತಿಯು ನೂತನ ಸದಸ್ಯರನ್ನು ಬೃಹಚ್ಚರಣ ಸಂಘಕ್ಕೆ ಹಾರ್ದಿಕವಾಗಿ ಸ್ವಾಗತಿಸುತ್ತದೆ.**

### ವಧು–ವರ ಸಂಪದ

ಈ ಹಿಂದೆ ತಿಳಿಸಿದಂತೆ ಬೃಹಚ್ಚರಣ ಪಂಗಡದಲ್ಲಿನ ವಿವಾಹಯೋಗ್ಯ ವಧೂ–ವರರ ಮಾಹಿತಿಯ ಪ್ರಕಟಣೆಯನ್ನು ಮುಂದುವರೆಸುತ್ತೇವೆ. ಪ್ರಕಟಿಸಲ್ಪಡುವ ಮಾಹಿತಿ ಇಂತಿರುತ್ತದೆ:

1. ವಧು / ವರರ ಹೆಸರು, 2. ತಂದೆ / ತಾಯಿಯ ಹೆಸರು, 3. ಗೋತ್ರ, ನಕ್ಷತ್ರ / ರಾಶಿ, 4. ವಯಸ್ಸು / ಜನ್ಮದಿನ, ಎತ್ತರ, 5. ವಿದ್ಯಾರ್ಹತೆ, ಉದ್ಯೋಗ ಮತ್ತು 6. ಸಂಪರ್ಕ ಮಾಹಿತಿ (ಹೆಸರು, ಮೊಬೈಲ್‌ನಂ., / ಇ–ಮೇಲ್) ಮಾಹಿತಿಗಳನ್ನು "ಬೃಹಚ್ಚರಣ" ಸಂಚಿಕೆಯಲ್ಲಿ ಪ್ರಕಟಣೆಗಾಗಿ ಕಳುಹಿಸಬಹುದು. ಆಸಕ್ತರು ಈ ಮಾಹಿತಿಗಳನ್ನು ಬಳಸಿಕೊಂಡು ಮುಂದುವರೆಯಬಹುದು.

ಸಂಪಾದಕರು, "ಬೃಹಚ್ಚರಣ" #27/1, Bull Temple Road, Basavanagudi, Bengaluru - 560004

ಈ ವಿಳಾಸಕ್ಕೆ ಅಂಚೆಯ ಮೂಲಕ ಅಥವಾ ಇ–ಮೇಲ್ ಖಾತೆ magazines@mmdbs.in ಗೆ ಕಳುಹಿಸಬೇಕು.

# ಸಾರ್ಥಕ ಬದುಕಿಗಾಗಿ ಸರಳ ಸೂತ್ರಗಳು

ಹಗಲು – ರಾತ್ರಿಯ ಚಕ್ರದಲ್ಲಿ ಪ್ರತಿ ಹಗಲೂ ಮಾನವನಿಗೆ ಹೊಸ ಜನ್ಮವೇ! ಇದನ್ನು ಹರ್ಷದಿಂದ ಬರಮಾಡಿಕೊಳ್ಳುವುದು ಮಾನವಧರ್ಮ. ಸುಖವಿರಲಿ, ದೂಃಖವಿರಲಿ ಎರಡನ್ನೂ ಸಮಚಿತ್ತದಿಂದ ಎದುರಿಸುವವನ ಜೀವನ ಸಾರ್ಥಕವಾಗುವುದು. ಅಂತಹ ಸಾರ್ಥಕ ಬದುಕಿಗಾಗಿ ಇಲ್ಲಿವೆ ಕೆಲವು ಸೂತ್ರಗಳು.

1. ಪ್ರತಿದಿನದ ಉಲ್ಲಸಿತ ಆರಂಭಕ್ಕಾಗಿ ಸ್ವ – ಆರೈಕೆಗೆ ಅದ್ಯತೆ ಇರಲಿ.
2. ಸಮಯದ ಸದ್ವಿನಿಯೋಗದ ಕೌಶಲವನ್ನು ಅರಿತುಕೊಳ್ಳಿ
3. ನಿಮಗಿರುವ ತೊಂದರೆಗಳಿಗೆ ನೈಸರ್ಗಿಕ ಶಮನೋಪಾಯಗಳನ್ನು ಕಂಡುಕೊಳ್ಳಿ.
4. ವಿಚಾರವಿನಿಮಯವಿರಲಿ. ಜೊತೆಗೆ ಸದಾ ಕ್ರಿಯಾಶೀಲರಾಗಿರಿ. ಇದಕ್ಕೆ ಪೂರಕವಾದ ಸಂಭಾಷಣೆ – ಚಟುವಟಿಕೆಗಳಲ್ಲಿ ಭಾಗವಹಿಸಿ.
5. ಜೀವನವು ಮತ್ತಷ್ಟು ಫಲಪ್ರದವಾಗಲುಅಗತ್ಯವಾದ ಸಂವಹನ ಕಲೆಯನ್ನು ಚುರುಕುಗೊಳಿಸಿಕೊಳ್ಳಿ.
6. ಒತ್ತಡಗಳನ್ನು ತೊಡೆದುಹಾಕಿ ಸಕಾರಾತ್ಮಕತೆಯನ್ನು ಬೆಳೆಸಿಕೊಳ್ಳಲು ಬೇಕಾದ ತಂತ್ರಗಳನ್ನು ಅಳವಡಿಸಿಕೊಳ್ಳಿ. ಮನೋ–ಒತ್ತಡ ನಿಯಂತ್ರಣ ಮೂಲತಃ ಅಂತರಂಗದಿಂದಲೆ ಮೂಡಿಬರಬೇಕು ಎಂಬ ಅರಿವನ್ನು ಬೆಳೆಸಿಕೊಳ್ಳಿ.
7. ಹರ್ಷಯುಕ್ತ ಜೀವನಕ್ಕಾಗಿ ನಿಮ್ಮೊಳಗೆ ಮೇಲಿನಂತೆ ಹೂಡಿಕೆ ಮಾಡಿ.
8. ಈ ರೀತಿಯಾಗಿ ನಿಮ್ಮ ವ್ಯಕ್ತಿತ್ವದ ಪರಿವರ್ತನೆಯನ್ನು ಸಾಧಿಸಲು ಇಂದೇ ಮುನ್ನಡಿಯಿಡಿ!



**ಎಸ್. ಶ್ರೀನಿವಾಸಯ್ಯ**
**78993 18098**

# ನಮ್ಮನ್ನಗಲಿದ ನಮ್ಮವರಿಗೆ ಗೌರವಪೂರ್ಣ ಶ್ರದ್ಧಾಂಜಲಿ



**ಆಶಾ ಕುಮಾರ್ (63)** 15.4.2025
ಸದಸ್ಯೆ



**ಎಸ್. ನಿರಂಜನ್ (65)** 22.4.2025
ಸದಸ್ಯ ಹಾಗೂ ಸದಸ್ಯೆ ಪದ್ಮಜಾ ರವಿಯವರ ತಂದೆ



**ಶಾಂತಾ (83)** 17.5.2025
ಸದಸ್ಯ ಶ್ರೀ ಎಸ್. ನಾಗರಾಜ್‌ರವರ ಅಕ್ಕನ ಮಗಳು



**ಎ.ಆರ್.ರವಿಂದ್ರ ಶರ್ಮ (76)** 7.6.2025
ಸದಸ್ಯ ಹಾಗೂ ಅಟ್ಟೂರು ರಾಮಕೃಷ್ಣರವರ ಸೋದರ



**ವೆಂಕಟಕೃಷ್ಣ ಟಿ.ಎಸ್. (ಮುರಳಿ) (69)** 11.6.2025
ಸದಸ್ಯ



**ಟಿ.ಎಸ್. ಉಷಾದೇವಿ 65 01–08–2025**
ಸದಸ್ಯ ಶ್ರೀ ಟಿ.ಎಸ್. ಚಂಪಕ್ ಮತ್ತು ಸದಸ್ಯೆ ಶ್ರೀಮತಿ ಟಿ.ಎಸ್. ರಮಾದೇವಿ ಅವರ ಸೋದರಿ

ಛಾಯಾಗ್ರಹಣ : ಕೆ.ಸಿ. ನಟರಾಜನ್

# ಶ್ರೀ ಶಂಕರ ಜಯಂತಿ ಆಚರಣೆ

ಸನಾತನ ಸಂಸ್ಕೃತಿಯ ಪುನರುತ್ಥಾನಕ್ಕೆ ಮೇರುಶಿಖರಪ್ರಾಯರಾದ ಆದಿಗುರು ಶ್ರೀ ಶಂಕರ ಭಗವತ್ಪಾದರ ಜಯಂತಿಯನ್ನು ಬೃಹಚ್ಚರಣ ಸಂಘವು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಆವರಣದಲ್ಲಿ ಅದರ ಆಡಳಿತ ಮಂಡಳಿಯ ಸಹಯೋಗದಿಂದ ಆಚರಿಸಲಾಯಿತು. ವೈಶಾಖ ಶುದ್ಧ ಪಂಚಮಿ, ದಿನಾಂಕ 2.5.2025ರ ಶುಕ್ರವಾರದಂದು ಭಕ್ತಿ ಸಂಗೀತ ಹಮ್ಮಿಕೊಳ್ಳಲಾಗಿತ್ತು.

ಅಂದು ಸಂಜೆ 7ಕ್ಕೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಮೊದಲಿಗೆ ಬಾಲ ಕಲಾವಿದೆ ಆರು ವರ್ಷದ ಚಿ. ಮಾನ್ಯಾಳ ಗಾಯನ ಏರ್ಪಾಡಾಗಿತ್ತು. ಚಿ॥ ಮಾನ್ಯಾ ಸಂಘದ ಸದಸ್ಯರಾದ ಶ್ರೀ ಎಸ್. ವೆಂಕಟೇಶ್ ಮತ್ತು ಸದಸ್ಯೆ, ಮೃದಂಗ ವಿದೂಷಿ ಶ್ರೀಮತಿ ರಂಜನಿ ಸಿದ್ಧಾಂತಿ ವೆಂಕಟೇಶ್‌ರವರ ಸುಪುತ್ರಿ. ತಾಯಿಯಿಂದ ಸಂಗೀತ ಪಾಠ ಅಭ್ಯಾಸ ಮಾಡುತ್ತಿದ್ದಾಳೆ. ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಪರಿಣಿತಿ ಗಳಿಸಲು ಸಾಧನೆ ಮಾಡುತ್ತಿರುವ ಬಾಲಕಿ ಚಿ॥ ಮಾನ್ಯಾಳನ್ನು ಸಂಘವು ಪ್ರೋತ್ಸಾಹಪೂರ್ವಕವಾಗಿ ಅಭಿನಂದಿಸಿ, ಆಶೀರ್ವದಿಸಿ ಉಜ್ವಲ ಭವಿಷ್ಯಕ್ಕಾಗಿ ಹಾರೈಸಿತು.

ಕಾರ್ಯಕ್ರಮದ ಪ್ರಧಾನ ಸಂಗೀತ ಕಛೇರಿಯಲ್ಲಿ ಗಮಕ ಕಲಾವಿದೆಯಾದ ಶ್ರೀಮತಿ ಸುಮಾ ಗುರುಪ್ರಸಾದ್‌ರವರಿಂದ ಭಕ್ತಿಪ್ರಧಾನ ದೇವರನಾಮಗಳು, ಶಾಸ್ತ್ರೀಯ ಸಂಗೀತ ಗಾಯನ ನಡೆದವು. ಇವರು ಸಂಘದ ಮಹಾಪೋಷಕರಾದ ಶ್ರೀ ಆರ್.ಎಸ್. ಗುರುಪ್ರಸಾದ್‌ರವರ ಪತ್ನಿ ಮತ್ತು ನಮ್ಮವರೇ ಆದ ಕರ್ನಾಟಕದ ಪ್ರಖ್ಯಾತ ಕವಿ–ಗಮಕಿ ಕರ್ನಾಟಕ ಕಲಾಶ್ರೀ ದಿವಂಗತ ಆರ್. ಶಂಕರನಾರಾಯಣ ಅವರ ಹೆಮ್ಮೆಯ ಸೊಸೆ. ಶ್ರೀಮತಿ ಸುಮಾರವರು ಕರ್ನಾಟಕ ಸಂಗೀತದಲ್ಲಿ ವಿದ್ವತ್ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯೊಂದಿಗೆ ತೇರ್ಗಡೆಯಾಗಿ ಮತ್ತು ಗಮಕ ಪಾರೀಣದಲ್ಲಿ ಮೊದಲನೆ ಸ್ಥಾನ ಪಡೆದಿದ್ದಾರೆ.

ಈ ಮೇಲಿನ ಇಬ್ಬರೂ ಗಾಯಕರಿಗೆ ಸಾಥ್ ನೀಡಿದ್ದು ಪಿಟೀಲು ವಾದಕರಾದ ಶ್ರೀ ಹೆಚ್.ಎಸ್. ಕೇಶವ ಪ್ರಸಾದ್‌ರವರು. ತಾಳವಾದ್ಯವಾದ ಖಂಜಿರ ನುಡಿಸಿದವರು ಸಂಘದ ಸದಸ್ಯ ಶ್ರೀ ಕಾರ್ತಿಕ್ ರವಿಕುಮಾರ್ ಅವರು. ಶ್ರೀ ಕಾರ್ತಿಕ್ ಬೆಂಗಳೂರಿನ ಆಕಾಶವಾಣಿಯ "ಎ" ಶ್ರೇಣಿ ಕಲಾವಿದರಾಗಿದ್ದಾರೆ.

ಕಲಾವಿದರನ್ನು ಸಂಘದ ಹಿರಿಯ ಸದಸ್ಯ ಶ್ರೀ ಆರ್.ಎನ್. ವೆಂಕಟಸುಬ್ಬರಾವ್ ಮತ್ತು ಅವರ ಪತ್ನಿ ಶ್ರೀಮತಿ ಲಲಿತಾರವರು ಸಂಘದ ಪರವಾಗಿ ಧನ್ಯವಾದಪೂರ್ವಕವಾಗಿ ಗೌರವಿಸಿದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಆರ್.ಪಿ. ರವಿಶಂಕರ್‌ರವರು ಕಲಾವಿದರನ್ನು ಸಂಪರ್ಕಿಸಿ, ಕಾರ್ಯಕ್ರಮ ಆಯೋಜಿಸುವುದಕ್ಕೆ ನೆರವಾದರು. ಸಂಘದ ಕಾರ್ಯದರ್ಶಿ ಶ್ರೀ ಆರ್.ಎ. ಶ್ಯಾಮಸುಂದರ್‌ರವರು ಪೂರ್ಣ ಜವಾಬ್ದಾರಿ ಹೊತ್ತು ಕಾರ್ಯಕ್ರಮವನ್ನು ನಡೆಸಿದರು. ಹಿರಿಯ ಸದಸ್ಯ ಶ್ರೀ ಕೆ.ಸಿ. ನಟರಾಜನ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಂದಿನಂತೆ ಉತ್ತಮ ಛಾಯಾಚಿತ್ರಗಳನ್ನು ಸೆರೆಹಿಡಿದರು. ಶ್ರೀಯುತರಿಗೆ ಮತ್ತು ಅವರಿಗೆ ಸಹಕರಿಸಿದ ಅವರ ಸುಪುತ್ರ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಶಿವಕುಮಾರ್‌ರವರಿಗೆ ಧನ್ಯವಾದಗಳು. ಪ್ರಾರಂಭದಲ್ಲಿ ಶ್ರೀಮತಿ ಲಲಿತಾ ರಮೇಶ್‌ರವರು ಕಲಾವಿದರನ್ನು ಸ್ವಾಗತಿಸಿ ಪರಿಚಯಿಸಿದರು. ಇದೇ ಸಂದರ್ಭದಲ್ಲಿ "ಬೃಹಚ್ಚರಣ" ಪತ್ರಿಕೆಯ ಜನವರಿ–ಮಾರ್ಚ್ ಸಂಚಿಕೆಯ ಪ್ರತಿಗಳನ್ನು ಅಂದು ಹಾಜರಿದ್ದ ಸದಸ್ಯರು ಪಡೆದುಕೊಂಡರು.

ಕಾರ್ಯದರ್ಶಿ ಶ್ರೀ ಆರ್.ಎ. ಶ್ಯಾಮಸಂದರ್‌ರವರು ವಂದನಾರ್ಪಣೆಯನ್ನು ನಡೆಸಿಕೊಟ್ಟರು. ಕಾರ್ಯಕ್ರಮದ ನಂತರ ಪ್ರಸಾದ ವಿತರಿಸಲಾಯಿತು.



**ಹೆಚ್. ಆರ್. ಲಲಿತಾ**
9945199637

## ಸದಸ್ಯರಲ್ಲಿ ವಿಜ್ಞಾಪನೆಗಳು

**ವಾರ್ಷಿಕ ನಿರ್ವಹಣಾ ವೆಚ್ಚವನ್ನು ಪಾವತಿಸಿರುವ ಸದಸ್ಯರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳು. ಇನ್ನೂ ಪಾವತಿಸಿಲ್ಲದ ಸದಸ್ಯರುಗಳು ದಯವಿಟ್ಟು ಶೀಘ್ರವಾಗಿ ಪಾವತಿಸಬೇಕು. ಸಂಘದ ಬ್ಯಾಂಕ್ ಖಾತೆಯ ವಿವರಗಳು ಮತ್ತು QR Code ಅನ್ನು ಪುಟ 1 ರಲ್ಲಿ ಕಾಣಿಸಲಾಗಿದೆ. ಈ ವಿಷಯದಲ್ಲಿ ತಮ್ಮಗಳ ಸಹಕಾರವು ಅತ್ಯವಶ್ಯಕವಾಗಿದೆ.**

# ಶ್ರೀ ಶಂಕರ ಜಯಂತಿ ಆಚರಣೆ (02–05–2025)






*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.
E-mail : magazines@mmdbs.in
Website : mmdbs.in

To,

Book-Post

**Published by Sri K.S. Arun, President, 'BRUHACHARANA SANGHA', # 27/1, Bull Temple Road, Basavanagudi, Bengaluru - 560004.**
**Printed at Hamsanikethan Prints, No. 126, C.T. Bed, 6th Cross Rd, Banashankari Stage II, Banashankari, Bengaluru - 560070.**